Licence No. 60,
Licenced to Post without Prepayment

Reg. No. M. 1550.
'KODAGU' MERCARA, (Coorg).

ಕೊಡಗು

ಸಂಪಾದಕರು—ಪಿ. ಐ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. ೨–೦–೦.

ಸಂಪುಟ ೩೦ | ತಾರೀಕು ೧೭–೮–೧೯೩೮ನೇ ಶುಕ್ರವಾರ | ಸಂಚಿಕೆ ೧೨

ರಚನಾತ್ಮಕ ಕಾರ್ಯಕರ್ತರು ಮತ್ತು ಚುನಾವಣೆಗಳು.

ಇದೇ ಸಂಚಿಕೆಯಲ್ಲಿ ಸರ್ವಸೇವಾ ಸಂಘದ ನಿಯಮಗಳನ್ನೂ ಧೋರಣೆಗಳನ್ನೂ ಇನ್ನೊಂದೆಡೆ ಕೊಟ್ಟಿದೆ. ಅವು ಎಲ್ಲ ರಚನಾತ್ಮಕ ಕಾರ್ಯಕರ್ತರಿಗೂ–ಅವರ ರಾಜಕೀಯ ಒಲವು ಯಾವುದೇ ಇರಲಿ–ಸ್ಪಷ್ಟ, ಸಮ್ಮತ ಮತ್ತು ಪರ್ಯಾಪ್ತವೆನಿಸುವುದೆಂದು ಆಶಿಸುತ್ತೇನೆ. ತಂತಮ್ಮ ಪಕ್ಷಗಳಿಂದ ಚುನಾವಣೆಗೆ ನಿಲ್ಲಿಸಲ್ಪಡುವವರು ಶೀಲವಂತರೂ ಸಮರ್ಥರೂ ಜಾತೀಯತಾ ಭಾವನೆಯಿಲ್ಲದವರೂ ಹಿಂಸಾವಿರೋಧಿಗಳೂ ಆಗಿರುವಂತೆ ರಚನಾತ್ಮಕ ಕಾರ್ಯಕರ್ತರು ನೋಡಿಕೊಳ್ಳಬೇಕೆಂದು ಅದರಲ್ಲಿ ಬಿನ್ನವಿಸಿಕೊಳ್ಳಲಾಗಿದೆ. ಒಂದು ಪಕ್ಷದ ಧ್ಯೇಯ ಕಾರ್ಯಕ್ರಮಗಳಿಗೂ ಇನ್ನೊಂದು ಪಕ್ಷದವಕ್ಕೂ ಇರುವ ಭೇದವನ್ನು ಅರಿಯಲಾರದ ಮತದಾರರು ಕೋಟಿಗಟ್ಟಲೆ ಇದ್ದಾರೆ. ಆದರೆ ತನ್ನ ಮತದಾರ ಸಂಘದಿಂದ ನಿಲ್ಲುವ ಹುರಿಯಾಳಿನ ವೈಯಕ್ತಿಕ ಚಾರಿತ್ರವನ್ನು ಅವರು ಬಲ್ಲರಿಂದು ನಿರೀಕ್ಷಿಸಬಹುದು. ಹುರಿಯಾಳಿನ ಯೋಗ್ಯತೆಯೇನೇ ಇರಲಿ, ವಿಶಿಷ್ಟ ಪಕ್ಷದವನಿಗೇ ಮತ ಕೊಡಿರಿ ಎಂದು ಹೇಳುವ ಅವಶ್ಯಕತೆಯಿಲ್ಲ. ತಮ್ಮ ವಿಶ್ವಾಸಕ್ಕೆ ಪಾತ್ರನೆಂದು ತೋರುವವನಿಗೆ ಅವರು ಮತ ಕೊಡಬೇಕಲ್ಲದೆ ಯಾವುದೊಂದು ಪ್ರಸಿದ್ಧ ಪಕ್ಷದವನಿಗಲ್ಲ. ವೈಯಕ್ತಿಕವಾಗಿ 'ಅ' ಇಲ್ಲವೆ 'ಬ'ನು ಎಷ್ಟೇ ದೊಡ್ಡವನಾಗಿರಲಿ, ಕಾಂಗ್ರೆಸ್ಸು ಅವನಿಗಿಂತ ಶ್ರೇಷ್ಠವೆಂದು ಒಂದು ಕಾಲದಲ್ಲಿ ಹೇಳಲಾಗುತ್ತಿತ್ತು. ಒಂದು ಸಂಸ್ಥೆಯ ಅಂತರಿಕ ವಿಚಾರಂಗಳ ಮಟ್ಟಿಗೆ ಇದು ಸತ್ಯವಾಗಿರಬಹುದು. ಆದರೆ ಇಡೀ ದೇಶದ ಹಿತದ ದೃಷ್ಟಿಯಿಂದ ಹೇಳಬೇಕಾದರೆ, ಒಂದು ಪಕ್ಷವೆನ್ನೇ ಪ್ರಾಮುಖ್ಯವಾಗಿರಲಿ, ಅದಕ್ಕಿಂತ 'ಅ' ಇಲ್ಲವೆ 'ಬ'ನ ವೈಯಕ್ತಿಕ ಯೋಗ್ಯತೆಯೇ ಹೆಚ್ಚಿನದು.

ಆದರೂ ಈ ಸಂದರ್ಭದಲ್ಲಿ ಈಗಾಗಲೇ ಮೇಲೆ ಹೇಳಲಾದ ಒಂದು ವಿಷಯದಲ್ಲಿ ಎಚ್ಚರ ವಹಿಸುವುದು ಅವಶ್ಯವಾಗಿದೆ. ದುರ್ದೈವದಿಂದ ನಮ್ಮ ದೇಶವು ಧಾರ್ಮಿಕ ಮತ್ತು ಜಾತೀಯ ಪಂಗಡಗಳಲ್ಲಿ, ಅಹಿಂಸಾತತ್ವದ ಬಗ್ಗೆ ಪರಸ್ಪರ ವಿರುದ್ಧ ಅಭಿಪ್ರಾಯಗಳಲ್ಲಿ ಹಂಚಿಹಂಚಾಗಿ ಹೋಗಿದೆ. ಹೀಗಿರುವುದರಿಂದ ವಿದ್ವಾಂಸರೂ ಸಾತ್ವಿಕರೂ ನಿಷ್ಕಲಂಕ ಚರಿತ್ರರೂ ಲೋಭ ಸ್ವಾರ್ಥವಿಮುಕ್ತರೂ ಅಹಿಂಸಕರೂ ಆದ ಸಜ್ಜನರು ಕೂಡ ತಮಗೆ ಪ್ರಿಯವಾದ ಧಾರ್ಮಿಕ, ಸಾಂಸ್ಕೃತಿಕ, ಸಾಮಾಜಿಕ ಇಲ್ಲವೆ ಆರ್ಥಿಕ ಧ್ಯೇಯಸಾಧನೆಗಾಗಿ ರಾಜಕಾರಣದಲ್ಲಿ ಎಂಥ ಹೇಯಸಾಧನೆಗಳನ್ನು ಪಯೋಗಿಸಿದರೂ ಅಧರ್ಮವಲ್ಲವೆಂದು ಅಭಿಪ್ರಾಯಪಡುವುದುಂಟು. ವೈಯಕ್ತಿಕವಾಗಿ ಅವರು ಒಂದು ಇಲಿಯನ್ನು ಕೂಡ ಕೊಲ್ಲದಿರಬಹುದು. ಧನ ಮೋಹ ಮದ್ಯಮೋಹ ಸ್ತ್ರೀಮೋಹಗಳಿಂದ ಅವರು ಅವಿಚಲಿತರಾಗಿರಲೂಬಹುದು; ಆದರೂ ರಾಜಕೀಯ ವಿಜಯ ಸಾಧನೆಗಾಗಿ ಅವರು ಇವೆಲ್ಲ ಸಾಧನಗಳನ್ನು ಉಪಯೋಗಿಸಲೂ ಅನುಮತಿಸಬಹುದು. ಅಂಥ ಪ್ರಸಂಗಗಳಲ್ಲಿ ಒಬ್ಬನ ವೈಯಕ್ತಿಕ ಸುಶೀಲವು ಭ್ರಾಮಕವೇ ಸರಿ. ಅದು ದೇಶದ ಶಾಂತಿ ಸುಭಿಕ್ಷೆಗಳಿಗೆ ಕಂಟಕಪ್ರಾಯವಾಗಿದೆ. ಅವರು ಜನರನ್ನು ಉದ್ರೇಕಗೊಳಿಸಿ ಯೇಸುವನ್ನು ಸಿಲುಬೆಗೇರಿಸುವಂತೆ, ಗಾಂಧಿಗೆ ಗುಂಡಿಕ್ಕುವಂತೆ ಪ್ರೇರಿಸಬಹುದು. ಸಚ್ಚರಿತ್ರರೆಂದು ಪ್ರಸಿದ್ಧರಾಗಿದ್ದರೂ ಸಂಕುಚಿತ ದೃಷ್ಟಿಕೋಣವುಳ್ಳ ಹುರಿಯಾಳುಗಳಿಗೆ ಮತಕೊಟ್ಟು ಮತದಾರರು ಮೋಸಹೋಗಬಾರದು.

ಇದಕ್ಕೂ ವಿವರವಾಗಿ ಸೂಚನೆಗಳನ್ನು ಕೊಡಲು ಶಕ್ಯವಿಲ್ಲ. ಉದಾಹರಣೆಗಾಗಿ, ಎಲ್ಲ ಹುರಿಯಾಳುಗಳೂ ಅಷ್ಟೇ ಸಚ್ಚರಿತ್ರರೂ ಅಥವಾ ಅಷ್ಟೇ ಅವಿಶ್ವಾಸ್ಯರೂ ಆಗಿದ್ದರೆ ಏನು ಮಾಡಬೇಕೆಂದು ಒಬ್ಬರು ಪತ್ರ ಬರೆದಿದ್ದಾರೆ. ಸ್ವಂತ ವಿವೇಕವನ್ನು ಉಪಯೋಗಿಸಬೇಕು ಇಲ್ಲವೆ ಗೆಳೆಯರೊಡನೆ ಚರ್ಚಿಸಿ ನಿರ್ಧರಿಸಿಕೊಳ್ಳಬೇಕೆಂದಿಷ್ಟೇ ಇದಕ್ಕೆ ಉತ್ತರ ಕೊಡಬಹುದು. ಅವನು ತಪ್ಪಿದರೂ ಛಿಂತೆಯಿಲ್ಲ; ನಿಟ್ಟುನಿಟ್ಟಿಗೂ ಪರಪ್ರತ್ಯಯನೇಯನಾಗಿರುವುದಕ್ಕಿಂತ ತಪ್ಪು ಮಾಡುವುದೇ ಮೇಲು.

ಇನ್ನೊಂದು ಪ್ರಶ್ನೆ ಹೀಗಿದೆ, 'ಯುದ್ಧ ಬೇಡ'ವೆಂದು ನಂಬುವ ಶಾಂತಿವಾದಿಗಳಾದ ನಾವು ಯುದ್ಧ ರೂಪದ ಹಿಂಸೆಯನ್ನು ತ್ಯಜಿಸಬೇಕೆಂದು ಹುರಿಯೊಳುಗಳಿಗೆ ಹೇಳಬಾರದೆ? ಯಾವುದೊಂದು ಶಾಂತಿವಾದಿ ರಾಜಕೀಯ ಪಕ್ಷ ಇಲ್ಲವೆ ಸ್ವತಂತ್ರ ಶಾಂತಿವಾದಿ ಹುರಿಯಾಳಿನ ಪರವಾಗಿ ಮತದಾರರಿಗೆ ಹೀಗೆ ಸಲಹೆ ಕೊಡುವುದು ಗ್ರಾಹ್ಯವಾಗಬಹುದು. ಆದರೆ ಯಾವ ಪ್ರಸಂಗದಲ್ಲೂ ಯುದ್ಧವನ್ನು ಒಲ್ಲದ ಪಕ್ಷವಾವುದೂ ಇಲ್ಲದಿರುವಾಗ ಈ ಪ್ರಶ್ನೆಯನ್ನು ಕಾರ್ಯಕರ್ತನೂ ಮತದಾರನೂ ತಾವೇ ನಿರ್ಧರಿಸಿಕೊಳ್ಳುವುದು ವಿಹಿತ.

ಹೀಗೆ ಸರ್ವ ಸೇವಾಸಂಘದ ಸೂಚನೆಗಳಲ್ಲಿ ವಿವರಿಸಲ್ಪಡದ ಅನೇಕ ಪ್ರಶ್ನೆಗಳನ್ನು ಎತ್ತಬಹುದಾಗಿದೆ. ವಿಶೇಷ ವಿವರಣೆ ಅವಶ್ಯವೆನಿಸುವಷ್ಟು ಮಹತ್ವ ಅವುಗಳಿಗಿದ್ದರೆ ಸಂಘವು ವಿವರಿಸಿಯೇ ವಿವರಿಸುವುದೆಂದು ನಂಬಿದ್ದೇನೆ. ಆದರೆ ಸರ್ವಥಾ ನಿರ್ದುಷ್ಟವಾಗುವಂತೆ ಅಥವಾ ಕಾರ್ಯಕರ್ತರೂ ಮತದಾರರೂ ಸ್ವಂತ ವಿಚಾರಶಕ್ತಿಯನ್ನು ಪಯೋಗಿಸುವ ಅಗತ್ಯವೇ ಇಲ್ಲದಂತೆ ಸೂಚನೆಗಳನ್ನು ತಯಾರಿಸುವುದು ಅಶಕ್ಯವೆಂದು ಅವರು ಮನಗಾಣಬೇಕು.

ಕೆ. ಫ. ಮಶ್ರೂವಾಲಾ.

ರಚನಾತ್ಮಕ ಕಾರ್ಯಕರ್ತರಿಗೂ ಮತದಾರರಿಗೂ ಮಾರ್ಗದರ್ಶನ.

(ವರ್ಧಾದಲ್ಲಿ ಜುಲೈ ೩೦ ರಂದು ಸೇರಿದ ಸರ್ವಸೇವಾಸಂಘದ ಸಭೆಯಲ್ಲಿ ಮುಂಬರುವ ಚುನಾವಣೆಗಳ ಬಗ್ಗೆ ಅದರ ಧೋರಣೆ ಅಭಿಪ್ರಾಯಗಳನ್ನು ವ್ಯಕ್ತಗೊಳಿಸುವ ಈ ಕೆಳಗಿನ ಗೊತ್ತುವಳಿಯನ್ನು ಅಂಗೀಕರಿಸಲಾಗಿದೆ.

—ವಲ್ಲಭಸ್ವಾಮಿ)

ಎಲ್ಲ ರಚನಾತ್ಮಕ ಕಾರ್ಯಗಳ ಹಿರಿಮೋದ್ದೇಶವೂ ಸರ್ವೋದಯ, ಅರ್ಥಾತ್ ಸತ್ಯ, ಅಹಿಂಸೆ ಮತ್ತು ಸರ್ವ ಕಲ್ಯಾಣದ ಆಧಾರದ ಮೇಲೆ ನೀತ ಅಹಿಂಸಕ್ಯ ಆತೋಷಕ ಸಾಮಾಜಿಕ ವ್ಯವಸ್ಥೆಯನ್ನು ಸ್ಥಾಪಿಸುವುದೇ ಆಗಿರುವುದರಿಂದ; ಮತ್ತು

ಮುಂಬರುವ ಚುನಾವಣೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಬೇರೆ ಬೇರೆ ರಾಜಕೀಯ ಪಕ್ಷಗಳು ಪರಸ್ಪರ ವಿಶೇಷ ಭೇದವಿಲ್ಲದ ಮತ್ತು ಕಲ ಮಟ್ಟಿಗೆ ಸರ್ವೋದಯದ ಪರಿಭಾಷೆಯನ್ನು ಉಪಯೋಗಿಸಿದ ಕಾರ್ಯಕ್ರಮಗಳನ್ನೂ ಘೋಷಣೆಗಳನ್ನೂ ಹೊರಡಿಸುತ್ತಿರುವುದರಿಂದ; ಮತ್ತು

ಈ ಸಂಬಂಧದಲ್ಲಿ ಅನೇಕ ರಚನಾತ್ಮಕ ಕಾರ್ಯಕರ್ತರು ಸರ್ವಸೇವಾ ಸಂಘದಿಂದ ಸ್ಪಷ್ಟವಾದ ಮಾರ್ಗದರ್ಶನವನ್ನು ಅಪೇಕ್ಷಿಸುತ್ತಿರುವುದರಿಂದ,

ಈ ಬಗ್ಗೆ ಸರ್ವಸೇವಾ ಸಂಘವು ಈ ಕೆಳಗಿನಂತೆ ತನ್ನ ಅಭಿಪ್ರಾಯವನ್ನೂ ಧೋರಣೆಯನ್ನೂ ವ್ಯಕ್ತಗೊಳಿಸುತ್ತಿದೆ:

೧. ವಿವಿಧ ರಾಜಕೀಯ ಪಕ್ಷಗಳ ಈ ಕಾರ್ಯಕ್ರಮಗಳೂ ಘೋಷಣೆಗಳೂ ಸರ್ವೋದಯ ಸ್ಥಾಪನೆಗೆ ಪೂರ್ಣ ಅನುಕೂಲವಾಗಿವೆಯೆಂದು ಸರ್ವಸೇವಾ ಸಂಘಕ್ಕೆ ತೋರುವುದಿಲ್ಲ. ಅಧಿಕಾರ ಪ್ರಾಪ್ತಿಯ ನಂತರ ಈ ಕಾರ್ಯಕ್ರಮಗಳನ್ನು ಕೂಡ ಅವು ಸರಿಯಾಗಿ ಮತ್ತು ಪರಿಣಾಮಕರವಾಗಿ ಆಚರಣೆಗೆ ತರುವವೆಂಬ ವಿಶ್ವಾಸವೂ ಅದಕ್ಕಿಲ್ಲ. ಆದ್ದರಿಂದ ಸ್ಪರ್ಧಿಸಹೊರಟಿರುವ ಯಾವ ರಾಜಕೀಯ ಪಕ್ಷವನ್ನೂ ತನ್ನದೆಂದು ಸಂಘವು ಪರಿಗ್ರಹಿಸಲಾರದು.

೨. ಅಧಿಕಾರ ಪ್ರಾಪ್ತಿಯ ಹಂಬಲವಿಟ್ಟುಕೊಳ್ಳದೆ ಮತದಾರರ ಶುದ್ಧ ನಿಃಸ್ವಾರ್ಥ ಸೇವೆಯಲ್ಲಿ ಉದ್ಯುಕ್ತವಾಗುವ ಮೂಲಕ ರಾಜಕೀಯ ಶಕ್ತಿಯನ್ನು ಸಂಘಟಿಸಬಹುದೆಂದೂ ಆ ಮೂಲಕ ಮತದಾರರ ಮೇಲೆ ಪ್ರಭಾವ ಬೀರಿ ಮಾರ್ಗದರ್ಶನ ಕೊಟ್ಟು ಯೋಗ್ಯ ಜನರು ಅಧಿಕಾರಕ್ಕೆ ಬರುವಂತೆ ಮಾಡಲು ಸಾಧ್ಯವಿದೆಯೆಂದೂ ಸಂಘವು ನಂಬಿದೆ.

೩. ಸ್ವಶಕ್ತಿ ರಚನಾತ್ಮಕ ಕಾರ್ಯಕರ್ತರೇ ಸರಕಾರವನ್ನು ನಡೆಸುವ ಹೊಣೆ ಹೊರುವ ಪ್ರಶ್ನೆ ಉದ್ಭವಿಸಬೇಕಾದರೆ ಜನರು ತಾವಾಗಿಯೇ ರಚನಾತ್ಮಕ ಕಾರ್ಯಕರ್ತರೇ ಅಧಿಕಾರ ವಹಿಸಬೇಕೆಂದೂ ಬೇರಾರೂ ಬೇಡವೆಂದು ಹೇಳುವ ಸ್ಥಿತಿ ಮೊದಲು ಬರಬೇಕು. ಆದರೆ ಇದು ಭವಿಷ್ಯತ್ತಿನ ಮಾತಾಯಿತು.

೪. ಆದರೂ ಆಧುನಿಕ ಪ್ರಪಂಚದ ಸ್ಥಿತಿಯಲ್ಲಿ ಶಾಸನ ಸಭೆಗಳೂ ಸರಕಾರಗಳೂ ಜನ ಜೀವನದ ಪ್ರತಿಯೊಂದು ಅಂಗದ ಮೇಲೂ ಪರಿಣಾಮ ಮೂಡಿ ಪ್ರತಿಯೊಂದು ಅವಸ್ಥೆಯಲ್ಲಿಯೂ ರಾಷ್ಟ್ರೀಯ ಪುನರ್ನಿರ್ಮಾಣವನ್ನು ರೂಪಿಸುವುದೆಂದು ಲಕ್ಷ್ಯದಲ್ಲಿಟ್ಟುಕೊಳ್ಳಬೇಕಾಗಿದೆ. ಸರ್ವೋದಯ ಧ್ಯೇಯಕ್ಕೆ ವಿಪರೀತವಾದ ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ವ್ಯವಸ್ಥೆಯಲ್ಲಿ ನಂಬಿಕೆಯಿಟ್ಟಿರುವ ಪಕ್ಷಗಳನ್ನೊಳಗೊಂಡ ಸರಕಾರಗಳು ಅಸ್ತಿತ್ವದಲ್ಲಿ ಬಂದರೆ ರಚನಾತ್ಮಕ ಕಾರ್ಯಕ್ರಮಕ್ಕೆ ಆತಂಕವುಂಟಾದೀತೆಂಬುದನ್ನೂ ನೆನಪಿನಲ್ಲಿಟ್ಟಿರಬೇಕು. ಅದು ಕಾರಣ, ರಚನಾತ್ಮಕ ಕಾರ್ಯಕರ್ತರು ಏಡೆಬಿಡದೆ ತಮ್ಮ ಚಟುವಟಿಕೆಗಳನ್ನು ನಡೆಸುತ್ತಿರುವಾಗಲೂ ರಾಜಕಾರಣದಲ್ಲಿಯೂ ರಾಷ್ಟ್ರದ ಸಾಮಾನ್ಯದಲ್ಲಿಯೂ ಬುದ್ಧಿಪೂರ್ವಕ ಆಸ್ಥೆ ತೋರಿಸುವುದು ತಮ್ಮ ಸಮಗ್ರ ಸೇವಾ ಕಾರ್ಯದ ಒಂದು ಅಂಗವೆಂದು ಭಾವಿಸಬೇಕು. ಇದಕ್ಕಾಗಿ ಅವರು, ಮತದಾರರಿಗೆ ತಿಳಿವಳಿಕೆಕೊಟ್ಟು, ತಮ್ಮ ಪುತಿಪೆ ಪಾವಿತ್ರ್ಯ ಮತ್ತು ಶಕ್ತಿಯ ಅರಿವನ್ನು ಅವರಲ್ಲಿ ಉಂಟುಮಾಡಿ, ಜನಹಿತ ಮತ್ತು ಸಾರ್ವಜನಿಕ ಜೀವನದ ಪಾರಿಶುದ್ಧ್ಯ ರಕ್ಷಣೆಯಾಗುವ ರೀತಿಯಲ್ಲಿ ತಿಳಿವಳಿಕೆಯಿಂದಲೂ ನಿಃಸ್ವಾರ್ಥದಿಂದಲೂ ಫಲತವನ್ನು ಪಯೋಗಿಸುವಂತೆ ಅವರನ್ನು ಪ್ರೇರಿಸಬೇಕು. ಅಂದಾಕ್ಷಣ ಪ್ರತಿಯೊಬ್ಬ ಕಾರ್ಯಕರ್ತನೂ ಯಾವುದಾದರೊಂದು ರಾಜಕೀಯ ಪಕ್ಷದ ಸದಸ್ಯನಾಗಿರಬೇಕೆಂದು ಅರ್ಥವಲ್ಲ. ಬಹುಜನ ಕಾರ್ಯಕರ್ತರು ರಾಜಕೀಯ ಪಕ್ಷಗಳ ಸದಸ್ಯರಾಗಿರದಿದ್ದರೇ ಲೇಸು.

೫. ಸರ್ವಸೇವಾ ಸಂಘದ ಸದಸ್ಯರು ರಾಜಕಾರಣ, ಚುನಾವಣೆ ಮೊದಲಾದ ವುಗಳಲ್ಲಿ ಪ್ರತ್ಯಕ್ಷ ಭಾಗ ವಹಿಸಬೇಕೆ, ಅಥವಾ ಹುರಿಯಾಳುಗಳಾಗಿ ನಿಲ್ಲಬೇಕೇ ಎಂಬ ಬಗ್ಗೆ ೧೨ ಅಕ್ಟೋಬರ ೧೯೫೦ ರ ಸಂಘದ ಈ ಗೊತ್ತುವಳಿಯನ್ನು ಪುನರುಚ್ಚರಿಸಲಾಗಿದೆ.

'ಸರ್ವಸೇವಾ ಸಂಘದ ಅಧಿಕಾರಿ ವರ್ಗದವರೂ ಪೂರ್ಣ ವೇಳೆಯ ಕಾರ್ಯಕರ್ತರೂ, ಸಂಬಳದವರಿರಲಿ ಇಲ್ಲದಿರಲಿ, ಯಾವದೇ ರಾಜಕೀಯ ಸಂಸ್ಥೆಯಲ್ಲಿಯೂ, ಸರಕಾರದಲ್ಲಿಯೂ ಇಲ್ಲವೇ ಸ್ಥಾನಿಕ ಸರಕಾರದಲ್ಲಿಯೂ ಚುನಾವಣೆಗೆ ನಿಲ್ಲಕೂಡದು. ಆ ವಿರೋಧವಾಗಿ ಆಯ್ಕೆಯಾದರೂ ಅವರು ಆ ಸ್ಥಾನವನ್ನು ಸ್ವೀಕರಿಸಕೂಡದು. ಚುನಾವಣೆಯ ಕಾಲದಲ್ಲಿ ಅವರು ಪ್ರತ್ಯಕ್ಷ ಭಾಗ ವಹಿಸಕೂಡದು.'

ಮೇಲಿನ ನಿಷೇಧವು ಅದರಲ್ಲಿ ಉಲ್ಲೇಖಿಸಲ್ಪಡದ ವರ್ಗದ ಕಾರ್ಯಕರ್ತರಿಗೆ ಅನ್ವಯಿಸುವುದಿಲ್ಲವೆಂಬುವುದು ಸ್ಪಷ್ಟವಿದೆ. ಅಂಥವರು ಸ್ವಂತವಾಗಿ ತಾವಿರುವ ರಚನಾತ್ಮಕ ಸಂಸ್ಥೆಯ ನಿಯಮಗಳಿಗೊಳಪಟ್ಟು ರಾಜಕಾರಣದಲ್ಲಿ ಭಾಗ ವಹಿಸಲು ಸ್ವತಂತ್ರರಿದ್ದಾರೆ. ರಚನಾತ್ಮಕ ಕಾರ್ಯದ ಹಿತವನ್ನು ಶಕ್ತಿಮೀರಿ ಸಾಧಿಸುವುದು ಅವರ ಕರ್ತವ್ಯವಾಗಿದೆ. ಆದರೂ ಅವರು ಸರ್ವ ಸೇವಾ ಸಂಘದ ಪ್ರತಿನಿಧಿಗಳೆಂದು ಹೇಳಿಕೊಳ್ಳಲಾರರು.

ನಿಜವಾಗಿ, ಕೆಲ ಸಮರ್ಥ ರಚನಾತ್ಮಕ ಕಾರ್ಯಕರ್ತರು 'ಸ್ವತಂತ್ರ'ರಾಗಿಯೋ ಒಂದು ರಾಜಕೀಯ ಪಕ್ಷದ ಸದಸ್ಯರಾಗಿಯೋ ರಾಜಕಾರಣದಲ್ಲಿ ಭಾಗ ವಹಿಸುವದು ರಚನಾತ್ಮಕ ಕಾರ್ಯದ ದೃಷ್ಟಿಯಿಂದ ಇಷ್ಟವಾಗಿರಬಹುದು. ರಚನಾತ್ಮಕ ಕಾರ್ಯದಲ್ಲಿನ ಮೂಲಭೂತ ಶ್ರದ್ಧೆಯ ರಕ್ಷಣೆಗಾಗಿ ಹೂಡಬಹುದಾದ ರಾಜಕೀಯ ಚಳವಳಿಯಲ್ಲಿ ಧುಮುಕುವ ಪ್ರಸಂಗವೂ ರಚನಾತ್ಮಕ ಕಾರ್ಯಕರ್ತರಿಗೆ ಬರಬಹುದು. ಆದರೆ ಸದ್ಯಕ್ಕೆ ಈ ಪ್ರಶ್ನೆ ಉದ್ಭವಿಸುವುದಿಲ್ಲ

೬. ಈ ಸ್ಥಿತಿಯಲ್ಲಿ ಸರ್ವ ಸೇವಾಸಂಘವು ರಾಜಕೀಯ ಪಕ್ಷವಾಗಿ ವರ್ತಿಸುವುದು ಅಪೇಕ್ಷಣೀಯವಲ್ಲ. ಆದರೆ ಯಾವುದೊಂದು ರಾಜಕೀಯ ಪಕ್ಷದ ಸದಸ್ಯರಾಗಿರುವ ರಚನಾತ್ಮಕ ಕಾರ್ಯಕರ್ತರು ತಮ್ಮ ತಮ್ಮ ಪಕ್ಷಗಳ ಮೇಲೆ ಒತ್ತಾಯ ತಂದು, ಅವಿವೇಕಕ್ಕೆ ಬಲಿಬೀಳದ, ನಿಸ್ವಾರ್ಥ, ಸಮರ್ಥ ಜನರನ್ನೇ ಹುರಿಯಾಳುಗಳಾಗಿ ನಿಲ್ಲಿಸುವಂತೆ ಪ್ರಯತ್ನಿಸಬೇಕು. ನಮ್ಮ ಶಾಸನ ಸಭಾ ಸದಸ್ಯರ ಮತ್ತು ಸರಕಾರ ನಡೆಸುವ ಹೊಣೆ ಹೊತ್ತವರ ನೈತಿಕ ಮಟ್ಟವನ್ನು ಎತ್ತರಿಸಲು ಇದೊಂದೇ ಉಪಾಯ. ಮತದಾರರಿಗೆ ಸಂಘದ ಉಪದೇಶವೇನೆಂದರೆ, ತನ್ನ ಅಭಿಪ್ರಾಯದಲ್ಲಿ ಸಾರ್ವಜನಿಕ ಜೀವನದಲ್ಲಿ ಸಾಕಷ್ಟ ಪರಿಶುದ್ಧ ಚಾರಿತ್ರ್ಯನೆನಿಸದಿರುವ ಹುರಿಯಾಳನ್ನು ಮತದಾರನಿಗೆ ನೇಚ್ಛೆಯೊದ ಪಕ್ಷವೇ ನಿಲ್ಲಿಸಿದ್ದರೂ ಅವನಿಗೆ ಮತಹಾಕಲು ನಿರಾಕರಿಸಬೇಕು. ಜಾತೀಯ ಭಾವನೆಯಿಂದ ಅಥವಾ ಉದ್ದೇಶ ಸಾಧನೆಗೆ ಹಿಂಸೆಯನ್ನು ಉಪಯೋಗಿಸುವುದರಲ್ಲಿ ವಿಶ್ವಾಸವುಳ್ಳ ಅಥವಾ ಉದ್ದೇಶ ಸಾಧನೆಗೆ ಹಿಂಸೆಯನ್ನು ಉಪಯೋಗಿಸುವುದರಲ್ಲಿ ವಿಶ್ವಾಸವುಳ್ಳ ಹುರಿಯಾಳಿಗೆ ಮತ ಹಾಕುವದಂತೂ ಎಂದಿಗೂ ಸಲ್ಲದು. ಏಕೆಂದರೆ ಅದು ಸರ್ವೋದಯದ ತತ್ವಗಳಿಗೇ ವಿಪರೀತವಾಗಿದೆ.

॥ ಕುಲಮೂತೆಗೆ ॥

ಲೇ:—ಶ್ರೀ ಎಂ. ಎಸ್. ಮೊಣ್ಣಪ್ಪ, ಕಾನೂರು.

ಅಮ್ಮಾ, ಕುಲಮೂತೆ, ನೀನು 'ಕಣ್ಣು ಕಾಣದ ಗಾವಿಲರು' ಎಂಬ ಶೀರ್ಷಿಕೆಯ ನಾನೆಯಲ್ಲಿ ಬರೆದ ಲೇಖನವನ್ನು ಓದಿದೆ. ನಾನು ಬರೆದ ಹರಟೆಯನ್ನು ಓದಿ ನಿನ್ನಂತ ಹಳೆಯ ಹೆಂಗಸಿಗೆ ಬುದ್ಧಿವಿಕಲ್ಪವಾಗಬಹುದೆಂದು ನಾನೆಣಿಸಿರಲಿಲ್ಲ. ನಾನು ಬರೆದದ್ದು ಈಗಿನ ಸೋಗಿನ ನವನಾಗರಿಕತೆಯ ಕಲಿತ ಸ್ತ್ರೀಯರ ವಿಷಯವಾಗಿ. ನಿನ್ನ ಮಕ್ಕಳಾದ ನಾವು ವಿರಾಮ ಕಾಲದಲ್ಲಿ ಸಂತೋಷಕ್ಕಾಗಿ ಹಾಡುವುದು, ಕಥೆ ಕಟ್ಟುವುದು, ತರ್ಕಿಸುವುದು ರೂಢಿ. ನಾನು ಸ್ತ್ರೀಗೆ ಸ್ಥಾನವೆಲ್ಲಿ ಎಂದು ಹರಟೆಯಲ್ಲದೆ, ಸಿದ್ಧಾಂತಿಸಿಲ್ಲ. ಹರಟೆಯೆಂಬದಾಗಿ ಬರೆದದ್ದು ನಿನ್ನ ಕಣ್ಣಿಗೆ ಕಾಣಿಸಿಲಿಕ್ಕಿಲ್ಲ. ನೀನು ಕುಲಮೂತೆಯಾದ್ದರಿಂದ ಸಾಮಾನ್ಯವಾಗಿ ನಿನ್ನ ಕಣ್ಣಿಗೆ ಚಾಲೀಸು ಬಂದಿರಲೇಬೇಕು. ಆಪ್ಪನಿಗೆ ಹೇಳಿ ಗಪ್ಪ ಕನ್ನಡಕ ತರಿಸಿಕೊಳ್ಳಲೇನಮ್ಮಾ? ನೀನು ಇನ್ನೂ ಈ ನವನಾಗರಿಕತೆಯ ಕಾಲದಲ್ಲಿ ಹನ್ನೆರಡನೆಯ ಶತಮಾನದ ಹರಿಯದ ಹೆಣ್ಣಿನಂತೆ ಸರದಾ ಪದ್ಧತಿಯನ್ನೇ ಬಿಡಲಾರದಿದ್ದರೂ ಕುಲಮೂತೆಯೆಂದು ಗುಪ್ತನಾಮದಿಂದ ಲೇಖನವನ್ನ ಬರೆದು ಅಡಕ್ಕೂ ಬಾರುಕಹಾಕಿ ಪತ್ರಿಕೆಯಲ್ಲಿ ಪ್ರತ್ಯಕ್ಷಳಾಗಿರುವೆ. ಇಂಥಹ ಕುಲೀನೆಯಾದ ಕುಲಮೂತೆ ನಿನ್ನ ಪುತ್ರಿಯರನ್ನು ಕುಲಗೆಡಿಸಿ ಕಾಣಿಸಲು ನೀನು ಎಷ್ಟು ನೂತ್ರಕ್ಕೂ ಪ್ರೋತ್ಸಾಹಿಸಬಾರದು. ಇದು ನಿನ್ನ ಕುಲೀನತೆಗೆ ತಕ್ಕುದಲ್ಲ.

ನಾನು ಹಾಡಿದ್ದು ಹಿಂದೂ ಕೋಡು ಬಿಲ್ಲಿನಿಂದ ಸ್ತ್ರೀಯರೇಗೆ, ಅಂದರೆ ನೀನು ಬರೆದಂತಹ ಸ್ವೋಪಾರ್ಜಿತ ಪೌರುಷಗಳ ದಾಸಿಯರಿಗೂ ಎತ್ತರ ಹಿಮ್ಮಡಿಯ ಕುಲಟೆಯರಿಗೂ ಹೊಸದಾಗಿ ಮೂಡಿದ ಕೋಡಿನವಿಷಯವಾಗಿ. ಅವರನ್ನು ಪುರುಷರೇ ದಾರಿತಪ್ಪಿಸುವವರೆಂದು ಆಕ್ಷೇಪಿಸಿರುವಿ. ಹಾಗಾದರೆ ಅವರಿಗೆ ಅಷ್ಟು ವ್ಯಕ್ತಿತ್ವವಿಲ್ಲವೆಂದು ನೀನೂ ಒಪ್ಪಿದಂತಾಯಿತು. ಪುರುಷರು ಕಾಣಿಸಿದಂತೆ ಕಾಣಿಯಬಾರದೆಂದು ಪರದಾಪದ್ಧತಿಯನ್ನು ಚಾ-ಚೂ ತಪ್ಪದೆ ಅನುಸರಿಸುತ್ತಿರುವ ನೀನೇತಕ್ಕೆ ಅವರನ್ನು ಎಚ್ಚರಿಸಬಾರದು? ನಿನ್ನ ಕರ್ತವ್ಯಚ್ಯುತಿಯನ್ನು ತಿಳಿದೇ ನಾನು ಹರಟೆಯೊಳಗೊಂದು ಗೊರಟೆಯಿಟ್ಟು ಬರೆದಿದ್ದೆ. ನೀನೇ ಅವರನ್ನು ಪರದೆಯೊಳಗೆ ಅಡಗಿಕೊಂಡು ಬೊಂಬೆಗಳನ್ನಾಗಿ ಆಡಿಸಿದರೆ ಕುಲಕ್ಕೆ ಕುಲಮೂತೆಯೇ ಕುಠಾರವಾದಂತಾಯಿತು. ಅವರಿಗೆ ಪಿತಾರ್ಜಿತ ಆಸ್ತಿಯಲ್ಲಿ ಪಾಲುಗಾರಿಕೆಯಿರಬೇಕೆಂದೂ ಅದರಿಂದ ಸ್ವತಂತ್ರ ಜೀವನಕ್ಕೆ ಆಸ್ಪದವಾಗುವುದೆಂದೂ ಹಾಗೆಯೇ ಕೈಹಿಡಿದ ಗಂಡಂದಿಯರನ್ನೆ ಬಿಟ್ಟು ವಿಂಡಂದಿಯರನ್ನು ಸೇರಲು ಅನುವಿರುವುದೆಂದೂ ಅವರ ಕೋಡಿನಲ್ಲಿ ಉಲ್ಲೇಖಿಸಿದೆ. ಹಾಗಾದ ಪಕ್ಷಕ್ಕೆ ನೀನ ಕುಲಪಿತನನ್ನು ಯಾವಾಗಲೊ ವಿವಾಹವಿಚ್ಛೇದನ ಮಾಡಿಕೊಂಡು ಕುಲಮೂತೆಯೆಂಬ ನಿನ್ನ ಹೆಸರಿಗೆ ತಲೆಬುಡವಿಲ್ಲದೆ ಬೀದಿಯ ಭಿಕಾರಿಯಾಗಬೇಕಿತ್ತು. ಆ ತರದ ಯಾವ ಸ್ವಾತಂತ್ರ್ಯವನ್ನೂ ಕೇಳದೆ ನಿಜವಾದ ಆರ್ಧಾಂಗಿಯಾಗಿದ್ದುದರಿಂದ ಇಂದು ನೀನು ಕುಲಮೂತೆಯೆಂದು ಹೇಳಿಕೊಂಡು ಪರದೆಯೊಳಗಿಂದಲಾದರೂ ಮಾತಾಡುವ ಸಾಮರ್ಥ್ಯವುಂಟಾಯಿತೆಂದು ನಾನು ಹೇಳಬಲ್ಲೆ. ಹಿಂದಿನ ಕಾಲದ ಭಾರತೀಯ ಸ್ತ್ರೀಯರಿಗೆ ಸ್ವಯಂವರದ ಹಕ್ಕಿದ್ದು ತಮ್ಮ ಗಂಡಂದಿಯರನ್ನು ತಾವೇ ಆರಿಸಿಕೊಳ್ಳುವ ಅನುವಿತ್ತೆಂದು ಹೇಳಿರುವಿ. ಈಗಿನ ಕಾಲದಲ್ಲಿ ತಂದೆತಾಯಿಗಳೇ ಸ್ವಯಂವರದ ಸಂಚಾಲಕರಾಗಿದ್ದು ಸ್ತ್ರೀಯರು ಸುನೀತೆಯರಾಗಿದ್ದಾರೆ ಈಗಿನ ನಿನ್ನ ಪುತ್ರಿಯರು ಪತ್ರಬರೆದು ಮಿತ್ರರನ್ನು ಸಂಪಾದಿಸಿ ರಾತ್ರಾರಾತ್ರಿಯೇ ನಿನಗೆ ತಿಳಿಯದಂತೆ ಸ್ವಯಂವರ ನಡೆಸಿ ಕಡೆಗೆ ಹರಾಭವವನ್ನು ಹೊಂದುವರು. ಆಗ ನೀನೂ ತಲೆತಗ್ಗಿಸಿಕೊಂಡು ಗೋಳಾಡುವಿ. ಈ ರೀತಿಯ ಲೈಂಗಿಕ ಸ್ವಾತಂತ್ರ್ಯ ಬೇಕೆಂದು ನಿನ್ನೆ ವಾದವೆ? ಸ್ತ್ರೀಯರನ್ನು ಪುರುಷರೇ ದಾರಿತಪ್ಪಿಸುವರೆಂದು ನೀನು ಕುಂಟು ನೆವವನ್ನು ಹೂಡಿರುವಿ. ಒಲಿಯದ ಸ್ತ್ರೀಯನ್ನ ಪುರುಷನಿಗೆ ಒಲಿಸುವುದು ಸಾಧ್ಯವಿಲ್ಲ. ಅಬಲೆಯರಾದ ಸ್ತ್ರೀಯರನ್ನು ಸಬಲರಾದ ಪುರುಷರು ಬಲಾತ್ಕರಿಸುವರೆಂದು ನೀನು ವಾದವನ್ನು ಹೂಡಬಹುದು. ನಿನ್ನನ್ನು ಈವರೆಗೆ ಯಾರೂ ಬಲಾತ್ಕರಿಸಿರಲಾರರೆಂದು ನನಗೆ ನಂಬುಗೆಯಿದೆ. ಅದಕ್ಕೆ ನಿನ್ನ ಕುಲೀನತ್ವವೇ ಕಾರಣ.

ನಿನ್ನ ಸಹೋದರಿಯರು ಕುಲಮೂತೆಯಾದ ನಿನ್ನಂತೆ ಘೋಷಾಪದ್ಧತಿಯಲ್ಲೇ ಇರಬೇಕೆಂದು ನಾನು ವಾದಿಸುವದಿಲ್ಲ. ನೀನೆಷ್ಟೋಮುಸಾಹಾರ್ದದಿಂದ ಸಂಸಾರ ನೀಗಿಸಿಕೊಂಡು ಬಂದು ಆಪ್ಪನ ಹೃದಯದಲ್ಲಿ ಐಕ್ಯವನ್ನ ಹೊಂದಿದೆಯೋ ಹಾಗೆಯೇ ನಿನ್ನೆಲ್ಲಾ ಪುತ್ರಿಯರನ್ನು ಪುರುಷರ ಹೃದಯದಲ್ಲಿ ಐಕ್ಯವಾಗುವಂತೆ ತರಬೇತಿಗೊಳಿಸುವುದು ಕುಲಮೂತೆಯಾದ ನಿನ್ನ ಕರ್ತವ್ಯವಾಗಿದೆ. ನೀನೇ ಅವರನ್ನ ದಾರಿ. ತಪ್ಪಿಸಿದರೆ ನಿನ್ನ ಕುಲವೆಂತು ಉಳಿದೀತು? ಅವರು ವೈಗಳಂತೆ ಸಿಕ್ಕ ಸಿಕ್ಕಲ್ಲಿ ಮರಿಗಳನ್ನು ಈಜಿದರೆ ನಿನ್ನ ಕುಲಧರ್ಮವೆಂತು ಉದ್ಧಾರವಾದೀತು? ಅವರೂ ನಿನ್ನಂತೆ ಎರದ ಬೇರಿನೋಪಾದಿಯಲ್ಲಿ, ಕಟ್ಟಡದ ಅಡಿಗಲ್ಲಿನೋಪಾದಿಯಲ್ಲಿ ದೇವಧರ್ಮರಾಜ್ಯದಲ್ಲಿ ತೊಳಗಿ ಬೆಳಗಿ ಕುಲಮೂತೆಯೆನಿಸುವುದು ನ್ಯಾಯವಲ್ಲದೆ ಪುರುಷನ ಆಶ್ರಯವಿಲ್ಲದೆ ಸ್ವತಂತ್ರಿಗಳಾಗಿ ನಿನ್ನ ಕುಲಕ್ಕೆ ಕಳಂಕ ತರಬಾರದೆಂದೇ ನನ್ನಾಶೆ. ಸ್ತ್ರೀಯರಿಲ್ಲದೆ ಸನ್ಯಾಸಿಗಳಾಗಿ ಬಿಟ್ಟರೆ ಗಂಡಸಿನ ಅಸ್ತಿತ್ವವೆಲ್ಲಿಯೆಂದು ಕೇಳಿರುವಿ. ಆಪ್ಪನಿಲ್ಲದೆ ಅಮ್ಮನ ಬೇಳೆಯೂ ಬೇಯಲಾರದೆಂಬುವುದನ್ನು ನೀನು ತಿಳಿಯಲಾರೆಯಾ? ಆಪ್ಪನಿಲ್ಲದೆ ನಿನ್ನ ಜೀವನ ಸುಗಮವಾಗದು. ನೀನು ಬರೆದ ಲೇಖನವು ಕೂಡ ಆಪ್ಪನಿಂದ ಬರೆಸಿದೆಯೋ ಎಂಬ ಸಂದೇಹ ನನಗುಂಟಾಗಿದೆ.

ಪೂರ್ವಕಾಲದಲ್ಲಿ ಸ್ತ್ರೀಯರು ಮೇದವನ್ನು ಓದಕೂಡದೆಂದೂ ಓದುವುದನ್ನು ಕೇಳಿದರೂ ಕೂಡ ಅವರ ಕಿವಿಗೆ ಸೀಸವನ್ನು ಕಾಸಿ ಸುರಿಯಬೇಕೆಂದೂ ವಿಧಿಸಿದ್ದರು. ಅಂತಹ ಮೂಢ ಸಂಪ್ರದಾಯಗಳನ್ನು ಹತ್ತಿಕ್ಕಲೋಸುಗ ಹೂನ್ನಮ್ಮನ್ನ "ಸೆಣ್ಣ ಸೆಣ್ಣೆಂದೇಕೆ ಬೈಯುವರು ಕಣ್ಣು ಕಾಣದ ಗಾವಿಲರು" ಎಂದು ಬರೆದ ದಲ್ಲದೆ ಇದಿನ "ಕೊಡಿನ" ಸ್ವತಂತ್ರ್ಯವನ್ನ ಪಡೆಯ ಬೇಕೆಂದಲ್ಲ. ಅದೇ ಹೆಣ್ಣೆಮ್ಮಳ ಬರೆದ ಹದಿಮೂದೆಯ ಥರ್ಪವೆಂಬದನ್ನ ಕುಲಮೂತೆಯಾದ ನೀನೂ ಓದಿಕೊಂಡು ನಿನ್ನ ಪುತ್ರಿಯರಿಗೂ ಮಂಡಿಟ್ಟು ಮಾಡಿಸು. ಅದರಲ್ಲಿ ನಿನ್ನ ಪುತ್ರಿಯರು ಕುಲಗೆಟ್ಟ ಕಾಣಿಯಬೇಕೆಂದು ಉಲ್ಲೇಖಿಸಿದ್ದುವುದಿಲ್ಲ ಆಂದಿನ ಆ ಹೊನ್ನಿನೀಥಾಹೊನ್ನವ್ವನಿಗೂ ಇಂದಿನ "ರೊಲ್ಡ್ ಗೋಲ್ಡ್" ಹೂನ್ನವ್ವನಿಗೂ ಕತ್ತೆಕುದುರೆಗಳ ಅಂತರವಿದೆಯೆಂದು ನಾನು ಹೇಳಬಲ್ಲೆ ಹೊನ್ನವ್ವನ ಸಾಲಲ್ಲಿ ವೀರಾಬಾಯಿ, ರಮಾಬಾಯಿ ಶ್ರೀ ಶಾರದಾವಣಿಪೀವಿಯವರು ನಿಂತರೆ ನಿನ್ನ ಇಂದಿನ ಹೆಣ್ಮಕ್ಕಳ ಸಾಲಿನಲ್ಲಿ ಹಾಲಿವುಡಿನ ನಗ್ನನಟಿಯರು ಸಾಲು ಸಾಲಾಗಿ ನಿಲ್ಲುವರ! ಪಂಟಿ ಬರೆಯವುದಕ್ಕೆ ನಿನ್ನ ಬೈಲಾಗಳೇನು? ನಾನು ಸಾಹಿತಿಯೆಂಬದು ಹೆಳಿಕೊಂಡಿರುವುದಿಲ್ಲ, ನನ್ನದು ಸಾಹಿತ್ಯ ಸೇವೆಯೂ ಅಲ್ಲ ಸಾಹಿತ್ಯ ಸಮುದ್ರದಲ್ಲಿ ಒಂದು ಅಣು ಆಗಿರಲೂಬಹುದೆಕೆ. ಮಾನವ ಸಮಾಜದ ಉದ್ಧಾರಕ್ಕೆ ಗಂಡಸು ಮತ್ತು ಹೆಂಗಸಿನ ಐಕ್ಯತೆ ಆಗತ್ಯವೆಂದು ನೀನೇ ಹೇಳಿರುವಿ. ಹಾಗೆಯೇ ಸ್ತ್ರೀಯು ಪುರುಷನ ಹೃದಯದಲ್ಲಿ ಐಕ್ಯವಾಗಬೇಕೆಂದು ನಾನೂ ತರ್ಕಿಸಿದ್ದೆ. ನಿನಗದು ಒಪ್ಪಿಗೆ ಇಲ್ಲದಿದ್ದರೆ ಬಿಡು. ಅಂತೂ ನೀನ ಸಂಬೆಯೊಳಗಿನ ಪಾವರಗಳಾಗದೆ ಹೊರಗೆ ಬಂದು ಮಕ್ಕಳಿಗೆ ಮಾತೆಯಾಗಿ ಗೃಹಕ್ಕನಿಗೆ ಗೃಹಿಣಿಯಾಗುವಿಯೆಂದು ಆಶಿಸುತ್ತೇನೆ.

['ಸ್ತ್ರೀಗೆ ಸ್ಥಾನವೆಲ್ಲಿ?' ಎಂದು ಪ್ರಕಟವಾದ ಶ್ರೀಯುತ ಎಂ. ಎಸ್. ಎಂ. ಇವರ ಹರಟೆಯನ್ನು ಸಮರ್ಥಿಸುವ ಮತ್ತು ಖಂಡಿಸುವ ಹಲವಾರು ಲೇಖನಗಳು ಬಂದಿವೆ; ಬರುತ್ತಲೂ ಇವೆ. ಈ ವಿಷಯದಲ್ಲಿ ಸಾಕಷ್ಟ ಅಭಿಪ್ರಾಯಗಳಿಗೆ ಪತ್ರಿಕೆಯಲ್ಲಿ ಸ್ಥಳ ಕೊಟ್ಟಿರುವದರಿಂದ ಮುಂದಕ್ಕೆ ಈ ಸಂಬಂಧದ ಲೇಖನಗಳನ್ನು ಪ್ರಕಟಿಸಲಾರೆವು. ಲೇಖನ ಕಳುಹಿಸಿದವರು ತಮ್ಮ ಲೇಖನಗಳು ವಾಪಸು ಬೇಕಿದ್ದರೆ ಸಂಕೆಷ್ಟ ಅಂಚೆ ಚೀಟಿಗಳನ್ನು ಕಳುಹಿಸಿ ವಾಪಸು ಪಡೆಯಬಹುದು.

ಸಂಪಾದಕ.]

—೦೦೦—

ನೆಹರೂರವರ ರಾಜಿನಾಮೆ?

ಪಂಡಿತ ಜವಾಹರಲಾಲ ನೆಹರೂರವರು ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸದಸ್ಯತನಕ್ಕೂ ಪಾರ್ಲಿಮೆಂಟರಿ ಬೋರ್ಡಿನ ಮೆಂಬರು ತನಕ್ಕೂ ರಾಜಿನಾಮೆ ಕೊಡುವ ಪತ್ರ ಬರೆದಿದ್ದಾರೆ. ಇವರೊಡನೆ ಅ ಬುಲ್ ಕಲಂ ಆಜಾದರೂ ರಾಜಿನಾಮೆ ಕೊಡುವರಂತೆ.

ಶ್ರೀ ನೆಹರೂರವರ ರಾಜೀನಾಮೆ ಪತ್ರದಿಂದ ಉದ್ಭವಿಸಿದ ಪರಿಸ್ಥಿತಿಯನ್ನು ಕುರಿತು ಕಾಂಗ್ರೆಸ ವರ್ಕಿಂಗ್ ಕಮಿಟಿಯು ಚರ್ಚಿಸಿತು.

ಸಮಸ್ಯೆಯು ತೀಕ್ಷ್ಣ ಸ್ವರೂಪದ ದೃಷ್ಟಿಯಿಂದ ಬಿಕ್ಕಟ್ಟನ್ನು ಎದುರಿಸಲು ಔಪಚಾರಿಕ ಕ್ರಮವನ್ನು ಪೈಕೊಳ್ಳತಕ್ಕದ್ದಲ್ಲವೆಂದು ಸಮಿತಿಯ ಹಿರಿಯ ಸದಸ್ಯರೇ ನೇಕರು ಉಪದೇಶಿಸಿದರಲ್ಲದೆ, ಬಿಕ್ಕಟ್ಟನ್ನು ನೀಗಿಸಲು ಉಪಾಯವನ್ನೇನಾದರೂ ಸೂಚಿಸಿಲ್ಲ. ಆದರೆ ತನ್ನ ನಿರ್ಧಾರವನ್ನು ಪುನಃ ಪರಿಶೀಲಿಸುವಂತೆ ಶ್ರೀ ನೆಹರೂರವರಿಗೆ ಕೇಳಿಕೊಳ್ಳಬೇಕೆಂದೂ ಅವರು ಬೋಧೆ ಮಾಡಿದರು.

ಶ್ರೀ ನೆಹರೂರವರು ತಮ್ಮ ರಾಜೀನಾಮೆ ಪತ್ರದಲ್ಲಿ ಯಾವ ಉಪಾಯಗಳನ್ನು ಸೂಚಿಸಿಲ್ಲವೆಂದು ವಿದಿತ ವರ್ಗಗಳಿಂದ ತಿಳಿದು ಬರುತ್ತದೆ. ಸದ್ಯದ ಕಾಂಗ್ರೆಸ್ ಕಾರ್ಯಕಾರಿಮಂಡಳಿಯು ಒಳ್ಳೆಯ ತಮಗೆ ಸರಿಬರಲಿಲ್ಲವೆಂದೂ ಸಮಿತಿಯ ಪುನರ್ರಚನೆಯು ರಾಷ್ಟ್ರಕ್ಕೂ ಸಂಸ್ಥೆಗೂ ಹಿತಕರವಾಗುವ ಮಾನಸಿಕ ಕ್ರಾಂತಿ ಮೂಡಬಹುದೆಂದೂ ಅವರು ಹೇಳಿದರು.

ಕಾಂಗ್ರೆಸ ಅಧ್ಯಕ್ಷರಾದ ಶ್ರೀ ಟಾಂಡನ್ನರು ಕಾಂಗ್ರೆಸ್ ಅಧ್ಯಕ್ಷಪದಕ್ಕೆ ರಾಜೀನಾಮೆ ಕೊಡುವ ಅಭಿಪ್ರಾಯವ್ಯಕ್ತಮಾಡಿದ್ದಾರೆ. ಇದು ಶ್ರೀ ನೆಹರೂರವರಿಗೆ ಬೇಕಾಗಿರಲಿಲ್ಲವೆಂದು ವಿದಿತ ವರ್ಗಗಳು ಪ್ರಸಿದ್ಧಿಸಿವೆ. ಅವರು ಅಧ್ಯಕ್ಷರಾಗಿ ಉಳಿಯುವದೇ ಶ್ರೀ ನೆಹರೂರವರಿಗೆ ಬೇಕಾಗಿದೆ.

ಸಮಿತಿಯು ಪುನರ್ರಚನೆ ಹಾಗೂ ಅಧ್ಯಕ್ಷರನ್ನು ಬಿಟ್ಟು ವರ್ಕಿಂಗ್ ಕಮಿಟಿಯ ಪದಾಧಿಕಾರಿಗಳ ಬದಲಾವಣೆ ಇವುಗಳು ಪ್ರಧಾನ ಮಂತ್ರಿಗಳನ್ನು ತೃಪ್ತಿಗೊಳಿಸಬಹುದೆಂದು ಶ್ರೀ ನೆಹರೂರವರೊಂದಿಗೆ ಈ ವಿಷಯದ ಬಗ್ಗೆ ಚರ್ಚಿಸಿದ ಕೆಲವು ಕಾಂಗ್ರೆಸ ಧುರೀಣರು ಅಭಿಪ್ರಾಯ ವ್ಯಕ್ತ ಮಾಡಿದ್ದಾರೆ.

ಆದರೆ ಕಾಂಗ್ರೆಸ್ ಅಧ್ಯಕ್ಷರು ಪರಿಸ್ಥಿಯ ಬಗ್ಗೆ ತೀಕ್ಷ್ಣ ಅಭಿಪ್ರಾಯ ತಳೆಯುವವರಿದ್ದಾರೆ.

ಅಧ್ಯಕ್ಷರು ಏ. ಐ. ಸಿ. ಸಿ. ಗೆ ಜವಾಬ್ದಾರರಾಗಿರುವದರಿಂದ ಅವರು ಆ ಸಂಸ್ಥೆಗೆ ರಾಜೀನಾಮೆ ಕೊಟ್ಟೆದ್ದಾದರೆ ಕಾಂಗ್ರೆಸ ಸಂಸ್ಥೆಯ ಧುರೀಣತ್ವವನ್ನು ವಹಿಸಲು ಶ್ರೀ ನೆಹರೂರವರಿಗೆ ಮೊಗವು ಸುಗಮವಾಗುವದೆಂದೂ ಅವರು ಹೇಳಿದರು. ಆದರೆ ಕಾಂಗ್ರೆಸ ಅಧ್ಯಕ್ಷ ಪಟ್ಟವನ್ನು ವಹಿಸಲು ಶ್ರೀ ನೆಹರೂರವರು ಒಪ್ಪಲಿಲ್ಲವೆಂದು ತಿಳಿದು ಬರುತ್ತದೆ.

ಶ್ರೀಗಳಾದ ಬಿ ಸಿ. ರಾಯ್ ಮತ್ತು ಗೋವಿಂದ ವಲ್ಲಭಪಂತ ಮೊದಲಾದ ಕಾಂಗ್ರೆಸ್ ಕಾರ್ಯಕರ್ತರು ನೆಹರೂರವರನ್ನೂ ಟಾಂಡನ್ನರನ್ನೂ ಕಂಡು ಸಂಧಾನದ ಏರ್ಪಾಡು ಮಾಡುತ್ತಿರುವರು. ಇವರ ಪ್ರಯತ್ನಗಳಿಂದಾಗಿ ಕಾಂಗ್ರೆಸು ಒಡೆಯದೆ ಈ ಹಿಂದಿನಂತೆ ಏಕಮುಖವಾಗಿ ಕೆಲಸ ಮಾಡುವದೆಂದು ತಿಳಿದು ಬಂದಿದೆ. ಟಾಂಡನ್‌ರವರು ಕಾಂಗ್ರೆಸ್ ವರ್ಕಿಂಗ್ ಕಮಿಟಿಯಲ್ಲಿ ಈಗಿರುವ ಸದಸ್ಯರನ್ನು ಬದಲಾಯಿಸಿ ಸಮಿತಿಯನ್ನು ಪುನರ್ಘಟಿಸಲು ಒಪ್ಪಿಕೊಂಡಿರುವರೆಂದೂ ಆದ್ದರಿಂದ ಪಂಡಿತ ಜವಾಹರರು ತಮ್ಮ ರಾಜಿನಾಮೆಯನ್ನು ಹಿಂತೆಗೆದುಕೊಳ್ಳಬಹುದೆಂದೂ ತಿಳಿಯು ಬಂದಿದೆ. ಇದರಂತೆ ಕಾಂಗ್ರೆಸ್ ಕಾರ್ಯಕಾರಿ ಮಂಡಳಿಯು ಈ ವಿಚಾರದಲ್ಲಿ ಒಂದು ನಿರ್ಣಯಕ್ಕೆ ಬಂದು ಪರಿಸ್ಥಿತಿಯನ್ನು ಸುಧಾರಿಸುವ ಬಗ್ಗೆ ನೆಹರೂರವರೂ, ಟಾಂಡನ್‌ರವರೂ ಸೇರಿ ಮಾತುಕತೆ ನಡೆಸಬೇಕೆಂದು ಅವರಿಗೆ ಅಧಿಕಾರ ಮಾಡಿದೆ.

ಸುಧಾರಣೆ ಮತ್ತು ಮತದಾರರು.

ಲೇ:- ಶ್ರೀ ಎಂ. ಸೋಮಯ್ಯ.

ಕೊಡಗಿಗೆ ಪ್ರಜಾಜವಾಬ್ದಾರಿ ಆಡಳಿತದ ಆನುವನ್ನು ಕೇಂದ್ರ ಸರಕಾರವು ಮಾಡಿಕೊಟ್ಟಿದೆಯೆನ್ನಬಹುದು. ಈ ಪ್ರಜಾಜವಾಬ್ದಾರಿ ಸರಕಾರವು ಜಾರಿಯಲ್ಲಿ ಬರುವ ಮೊದಲು ಕೊಡಗಿನ ಶಾಸನ ಸಭೆಗೆ ಚುನಾವಣೆಯಾಗಬೇಕು. ಕೊಡಗಿನಲ್ಲಿ ಚುನಾವಣೆಯು ಜನವರಿ ತಿಂಗಳಲ್ಲಿ ಆಗಬೇಕೆಂದು ಕೇಂದ್ರ ಸರಕಾರವು ಸೂಚಿಸಿದೆ. ತಾರೀಕ ಗಳನ್ನು ನಿಶ್ಚಯಿಸುವ ಜವಾಬ್ದಾರಿಯನ್ನು ಸ್ಥಳೀಯ ಸರಕಾರಕ್ಕೆ ಬಿಟ್ಟದೆ. ಕೊಡಗಿನಲ್ಲಿ ಜನವರಿ ತಿಂಗಳು ಒಳ್ಳೆ ಕುಯಿಲು ಕೆಲಸದ ಸಮಯ. ಆ ಸಮಯದಲ್ಲಿ ಚುನಾವಣೆಯಾದರೆ ಬಹುಮತದ ಜನರು ಮತದಾನ ಮಾಡಲಾ ಬಾರದಿರಬಹುದು. ಏಕೆಂದರೆ ಆ ಸಮಯದಲ್ಲಿ ಬಡ ರೈತನು ಒಂದು ದಿನದ ಕೆಲಸ ನಷ್ಟ ಮಾಡಿಕೊಳ್ಳಲು ಒಪ್ಪನು. ಆದ್ದರಿಂದ ಸ್ಥಳೀಯ ಸರಕಾರವು ಚುನಾವಣೆಯನ್ನು ರೈತನಿಗೆ ಬಿಡುವಿರುವ ಸಹುಯದಲ್ಲಿ ಆಗುವಂತೆ ನಿಶ್ಚಯಿಸಬೇಕಾಗಿದೆ. ಕೇಂದ್ರ ಸರಕಾರವೂ ಈ ಬೇಡಿಕೆಯನ್ನು ಸಲ್ಲಿಸದಿರದು.

ಕೊಡಗಿನ ಶಾಸನ ಸಭೆಗೆ ಚುನಾವಣೆ ನಡೆಯಲಿದೆ. ಪ್ರೌಢ ಮತದಾನ ಪದ್ಧತಿಯಿಂದ ಈ ಚುನಾವಣೆ ನಡೆಯಲಿದೆ. ಕೊಡಗಿನ ಜನಸಂಖ್ಯೆ ೨,೨೯,೦೦೦ ವಿದ್ದು ಪ್ರತಿ ಹತ್ತು ಸಾವಿರ ಜನರಿಗೆ ಒಬ್ಬ ಪ್ರತಿನಿಧಿಯಂತೆ ೨೩ ಪ್ರತಿನಿಧಿಗಳಿಂದ ಕೂಡಿ ಕೊಡಗಿನ ಶಾಸನ ಸಭೆಯು ರಚಿತವಾಗುವದು. ಈ ೨೩ ಜನರನ್ನು ಕೊಡಗಿನ ಸುಮಾರು ೯೫೦೦೦ ಮತದಾರರು ಆರಿಸುವರು. ಈ ಚುನಾವಣೆ ಕಳೆದ ನಂತರ ರಚಿತವಾಗುವ ಶಾಸನ ಸಭೆಯು ಕೊಡಗಿನ ಜನಾಭಿಪ್ರಾಯವನ್ನು ಪ್ರತಿಬಿಂಬಿಸುವ ಪ್ರತಿನಿಧಿ ಸಭೆಯಾಗುವದು. ಈ ಸಭೆಯೇ ಮುಂದೆ ದೇಶದ ಆಡಳಿತವನ್ನು ಹೊರಬಲ್ಲ ಮಂತ್ರಿಗಳನ್ನು ಆರಿಸುವದು. ಕೊಡಗಿಗೆ ಎಷ್ಟು ಜನ ಮಂತ್ರಿಗಳನ್ನು ನೇಮಿಸಲಾಗುವದೋ ತಿಳಿದಿಲ್ಲ. ಹೇಗೂ ಮೂರು ಜನರಿರುವದು ದೇಶ ಹಿತದೃಷ್ಟಿಯಿಂದ ಯೋಗ್ಯ.

ಕೊಡಗಿನ ರಾಜಕೀಯ ರಂಗದಲ್ಲಿ ಎರಡು ಪಕ್ಷಗಳಿವೆ. ಈ ಎರಡು ಪಕ್ಷಗಳಲ್ಲಿ ಯಾರು ಶಾಸನ ಸಭೆಯಲ್ಲಿ ಬಹುಮತವನ್ನು ಪಡೆಯುವರೋ ಆ ಪಕ್ಷದವರೊಳಗಿಂದ ಆರಿಸಲ್ಪಡುವವರೇ ಮಂತ್ರಿಗಳಾಗುತ್ತಾರೆ. ಆದ್ದರಿಂದ ಮುಂಬರುವ ಚುನಾವಣೆಯಲ್ಲಿ ಕೊಡಗಿನ ಭವಿಷ್ಯವೂ ತೀರ್ಮಾನವಾಗಲಿದೆಯೆನ್ನಬಹುದು. ಶಾಸನ ಸಭೆಗೆ ಬಹುಮತದಿಂದ ಯಾವ ಪಕ್ಷವು ಆರಿಸಲ್ಪಡುವದೋ ಅವರ ಮತವೇ ದೇಶದ ಅಭಿಮತವೆಂದಾಗುವದು. ಏಕೆಂದರೆ ಮುಂದೆ ಕೊಡಗಿನ ಭವಿಷ್ಯವನ್ನು ನಿರ್ಣಯಿಸುವ ಕಾಲಕ್ಕೆ ಆ ಪ್ರಶ್ನೆಯನ್ನು ಜನತೆಯ ಮುಂದಿಟ್ಟ ಜನರ ಅಭಿಪ್ರಾಯವನ್ನು ತೆಗೆದು ಕೇಂದ್ರ ಸರಕಾರವು ವರ್ತಿಸಲಾರದು. ಜನತೆಯಿಂದ ಆರಿಸಲ್ಪಟ್ಟಿರುವ ಶಾಸನ ಸಭೆಯವರ ಬಹುಮತ ಅಭಿಪ್ರಾಯದಂತೆ ಕೇಂದ್ರ ಸರಕಾರವು ವರ್ತಿಸುವದು ಆದ್ದರಿಂದ ಶಾಸನ ಸಭೆಯಲ್ಲಿ ಸಂಯೋಜನವಾದಿಗಳ ಬಹುಮತವಾದರೆ ಕೊಡಗಿನ ಸಂಯೋಜನೆಯು ಸಿದ್ಧಿಸಿದಂತೆ ಎನ್ನಲಡ್ಡಿಯಿಲ್ಲ. ಶಾಸನ ಸಭೆಯಲ್ಲಿ ಪ್ರತ್ಯೇಕವಾದಿಗಳ ಬಹುಮತವಾದರೆ ಕೊಡಗು ಪ್ರತ್ಯೇಕ ನಿಲ್ಲುವದೆನ್ನಲೂ ಸಂದೇಹವಿಲ್ಲ.

ಆದ್ದರಿಂದ ಮುಂಬರುವ ಚುನಾವಣೆಯೇ ಕೊಡಗನ್ನು ಉಳಿಸುವ ಯಾ ಅಳಿಸುವ ಸಂಧಿಕಾಲ. ಚುನಾವಣೆಯು ಕೊಡಗಿನ ಭವಿಷ್ಯದ ಒಂದು ಪ್ರಶ್ನೆಯ ಮೇಲೆಯೇ ನಡೆಯುವದು. ಆದ್ದರಿಂದ ಕೊಡಗನ್ನು ತಮ್ಮವರಾಗಿ ಉಳಿಸಿಕೊಳ್ಳುವ ಯಾ ಬೇರೆ ಪ್ರಾಂತದೊಡನೆ ವಿಲೀನಗೊಳಿಸುವ ಹಕ್ಕು ಜನತೆಗೆ ಕೊಡಲ್ಪಟ್ಟಿದೆ.

ಕೊಡಗನ್ನು ಈ ಮೊದಲೇ ಬೇರೆ ಪ್ರಾಂತ್ಯದೊಡನೆ ವಿಲೀನಗೊಳಿಸಬೇಕೆಂದು ಕೆಲವರು ಪ್ರಯತ್ನಪಟ್ಟರು. ಈ ವಿಚಾರದಲ್ಲಿ ಜನರ ಅಭಿಪ್ರಾಯವನ್ನು ತೆಗೆಯದೆ ಕೇಂದ್ರ ಸರಕಾರವೇ ಸ್ವಯಂ ನಿರ್ಣಯಮಾಡಿ ಕೊಡಗಿನ ಪ್ರತ್ಯೇಕ ಅಸ್ತಿತ್ವವನ್ನು ಅಳಿಸಿಬಿಡಬೇಕೆಂದು ಯತ್ನಿಸಿದರು. ಆದರೆ ಆದಿಯಿಂದಲೂ ಕೂಡ ಕೊಡಗನ್ನು ಪ್ರತ್ಯೇಕ ಇಡಬೇಕೆಂದೂ, ಹಾಗೆ ವಿಲೀನಗೊಳಿಸುವದು ಅನಿವಾರ್ಯವೆಂದು ಕೇಂದ್ರ ಸರಕಾರ ಹೇಳುವದಾದರೆ ಜನರ ಅಭಿಮತವನ್ನು ತೆಗೆದೇ ಮಾಡಬೇಕೆಂದು 'ಕೊಡಗು' ಪತ್ರಿಕೆಯೂ, ಪ್ರತ್ಯೇಕವಾದಿಗಳೂ ನಿಷ್ಠೆಯಿಂದ ಹೋರಾಡಿದರು. ಈ ಹೋರಾಟದ ಫಲವಾಗಿ ಕೊಡಗು ಇಂದಿನ ವರೆಗೆ ಪ್ರತ್ಯೇಕವಾಗಿ ಉಳಿದಿದೆ. ಕೊಡಗಿನ ಭವಿಷ್ಯ ನಿರ್ಣಯದ ಹಕ್ಕು ನಾವು ವಾದಿಸುತ್ತಿದ್ದಂತೆ ಇಂದು ಜನರ ಕೈಗೆ ಬಂದಿದೆ. ಕೊಡಗಿನ ರೈತರು, ಕೊಡಗಿನ ಮಜೂರರು, ಕೊಡಗಿನ ಜನತೆಯು ಕೊಡಗನ್ನು ಪ್ರತ್ಯೇಕವಿಟ್ಟುಕೊಳ್ಳಬೇಕೆಂದು ಆಸಕ್ತವಾದಾದರೆ ಬರುವ ಚುನಾವಣೆಯಲ್ಲಿ ಪ್ರತ್ಯೇಕವಾದಿಗಳನ್ನೇ ಶಾಸನ ಸಭೆಗೆ ಆರಿಸಬೇಕು. ಸಂಯೋಜನೆಯಾಗಬೇಕೆನ್ನುವದಾದರೆ ಆ ಅಭಿಪ್ರಾಯದವರನ್ನು ಆರಿಸಲಿ. ಹಿಂದೊಮ್ಮೆ ಕೊಡಗು ಬ್ರಿಟಿಷರ ವಶವಾಗುವಾಗ ಕೊಡಗಿನ ಜನರ ಅಭಿಪ್ರಾಯವನ್ನು ಯಾರೂ ಕೇಳಿಲಿಲ್ಲ. ಆಗ ಅಧಿಕಾರಸಲ್ಲಿದ್ದ ಕೆಲವು ಮುಂದಾಳುಗಳು ಕೊಡಗನ್ನು ಬ್ರಿಟಿಷರ ವಶಕ್ಕೊಪ್ಪಿಸಿದರು. ಆಗ ಜನಜಾಗೃತಿಯೇ ಯಾಗಿರಲಿಲ್ಲ. ಜನರು ಬ್ರಿಟಿಷರ ಆಡಳಿತವನ್ನು ಒಪ್ಪಿ ಶಿಕಬಾಗಿದರು. ಆದರೆ ಇಂದಿನ ಯುಗವು ಅಂದಿನಂತಲ್ಲ. ಇಂದಿನದು ಜನತಾಯುಗ. ಜನರ ಅಭಿಪ್ರಾಯದಂತೆಯೇ ಆಡಳಿತವು ನಡೆಯುವದು. ಬ್ರಿಟಿಷರ ವಶಕ್ಕೆ ಕೊಡಗನ್ನು ಒಪ್ಪಿಸಿದ ಅಂದಿನ ಮುಂದಾಳುಗಳನ್ನು ದೇಶದ್ರೋಹಿಗಳೆಂದು ಇಂದಿನ ವರೆಗೂ ನಾವು ಹಳಿಯುತ್ತಿದ್ದೆವು. ಇಂದು ದೇಶದ ಭವಿಷ್ಯವನ್ನು ನಿರ್ಣಯಿಸುವ ಆ ಹಕ್ಕು ಜನತೆಗೇ ಬಂದಿದೆ. ನಾವು ಸರಿಯೂದ, ಯೋಗ್ಯ ರೀತಿಯ, ಬಹು ಜನರ ಹಿತಕ್ಕೆ ಸಹಾಯಕವಾದ ನಿರ್ಣಯವನ್ನು ಮಾಡದಿದ್ದರೆ ಮುಂದಿನ ಪೀಳಿಗೆಯು ನಮ್ಮನ್ನು ದೇಶದ್ರೋಹಿಗಳೆಂದು ಕರೆಯದಿರದು.

ಈ ವರೆಗೆ ನಡೆದ ಕೊಡಗನ್ನು ಪ್ರತ್ಯೇಕ ವಿಡಬೇಕು ಮತ್ತು ಸಂಯೋಜನೆ ಗೊಳಿಸಬೇಕೆಂಬ ಎರಡುಪಕ್ಷಗಳ ಹೋರಾಟದಲ್ಲಿ ಪ್ರತ್ಯೇಕವಾದಿಗಳು ಜಯಪಡೆದರೆಂದು ಧೈರ್ಯವಾಗಿ ಹೇಳಬಹುದು. ಕೊಡಗಿನ ಭವಿಷ್ಯದ ವಿಚಾರದಲ್ಲಿ ಕೊಡಗಿನ ಜನರ ಅಭಿಮತವನ್ನು ವ್ಯಕ್ತಪಡಿಸುವ ಅನುವು ಮುಂದಿನ ಚುನಾವಣೆಯಲ್ಲಿ ಜನರಿಗೆ ದೊರೆಯುವದು. ಕೊಡಗಿಗೆ ಜವಾಬ್ದಾರಿ ಸರಕಾರವನ್ನು ಕೊಟ್ಟ ಪ್ರತ್ಯೇಕ ಆಡಳಿತ ನಡೆಸುವ ಆಶಯವನ್ನು ಕೊಡಬೇಕೆಂಬ ಆ ಹರ ಕೇಳಿಕೆಯೂ ಸಲ್ಲಿಸಲ್ಪಡುವದಿದೆ. ಮುಂಬಿನ ಚುನಾವಣೆಯನಂತರ ದೇಶದ ಆಡಳಿತ ಸೂತ್ರವು ಜನರಿಗೆ ಜವಾಬ್ದಾರರಾದ ಮಂತ್ರಿಗಳ ಕೈಗೆ ಬರಲಿದೆ. ಈ ಜಯವು ಪ್ರತ್ಯೇಕ ಪಕ್ಷಕ್ಕೆ ದೊರೆತಿದ್ದರಿಂದಕ್ಕೆ ಈ ವರೆಗೆ ಕೊಡಗಿನ ಜನತೆಯು ಸಾರ್ವಜನಿಕ ಸಭೆಗಳನ್ನೂ ಡೆಲ್ಲಿಗೆ ತಂತಿಗಳನ್ನೂ ಕಳುಹಿಸಿ ಪ್ರತ್ಯೇಕವಾದಕ್ಕೆ ಕೊಟ್ಟ ಅಪೂರ್ವ ಬೆಂಬಲವೇ ಕಾರಣ. ಆದ್ದರಿಂದ ಮುಂದೆ ಕೊಡಗು ಪ್ರತ್ಯೇಕವಿದ್ದು ಕೊಡಗಿನ ಜನತೆಯು ಅತೆಯು ಸಲ್ಲಿಸಲ್ಪಟ್ಟು ಕೊಡಗು ಸುಖಿಗಳ ನಾಡಾಗಿ ಶಾಂತಿಯುತ ಬೀಡಾಗಿ ಆಗಬೇಕಾದರೆ ಮುಂಬರುವ ಚುನಾವಣೆಯಲ್ಲಿ ಪ್ರತ್ಯೇಕ ವಾದಿಗಳನ್ನೇ ಆರಿಸಬೇಕು. ಏಕೆಂದರೆ ಸಂಯೋಜನಾವಾದಿಗಳನ್ನು ಆರಿಸಿ ಅವರ ಕೈಗೆ ಅಧಿಕಾರ ಕೊಟ್ಟರೂ ಅವರು ಅಂಧ ಆಡಳಿತ ನಡೆಸಿ ದೊರೆತಿರುವ ಸುಧಾರಣೆಯು ಫಲಪ್ರದವೂ, ಜಯಪ್ರದವೂ ಆಗದಂತೆ ಮುಂದು ಹಾಕಲು ಯತ್ನಿಸಿ ತಮ್ಮ ಗುರಿಯೂದ ಸಂಯೋಜಕತೆಯನ್ನು ಸಾಧಿಸಲು ಯತ್ನಿಸದಿರರು. ಆದ್ದರಿಂದ ಕೊಡಗಿನ ಜನರು ಎಚ್ಚರಿಕೆಯಿಂದ ವರ್ತಿಸಬೇಕು. ಸಂಯೋಜನಾವಾದಿಗಳಾರು. ಪ್ರತ್ಯೇಕವಾದಿಗಳಾರೆಂಬುದನ್ನು ಚೆನ್ನಾಗಿ ಗುರ್ತಿಸಿಕೊಳ್ಳಬೇಕು. ಸಂಯೋಜನಾವಾದಿಗೆಳಿಗೆ ಕೊಡುವ ಪ್ರತಿ ಓಟೂ ಕೊಡಗಿನ ಪ್ರತ್ಯೇಕ ಜೀವನಕ್ಕೆ ಬೀಳುವ ಏಟೆಂದೂ ಪ್ರತ್ಯೇಕವಾದಿಗಳಿಗೆ ಕೊಡುವ ಪ್ರತಿಮತವೂ ಕೊಡಗಿನ ಭವ್ಯ ಭವಿಷ್ಯದ ಪಥವೆಂದೂ ತಿಳಿಯಬೇಕು.

ಕೊಡಗು

ತಾ. ೧೭-೮-೧೯೪೭ನೇ ಶುಕ್ರವಾರ

ಸ್ವಾತಂತ್ರ್ಯ ದಿನ.

ಭಾರತಕ್ಕೆ ಸ್ವಾತಂತ್ರ್ಯದೊರೆತು ಈ ಆಗಸ್ಟ್ ೧೫ಕ್ಕೆ ನಾಲ್ಕು ವರ್ಷಗಳು ಸಂದು ಐದನೇ ವರ್ಷಕ್ಕೆ ಕಾಲಿಕ್ಕಿರುವೆವು. ಒಂದು ರಾಷ್ಟ್ರದ ಜೀವನದಲ್ಲಿ ನಾಲ್ಕು ವರ್ಷಗಳು ಕ್ಷಣ ಸಮಾನವೆನ್ನಬಹುದಾದರೂ ಈ ನಾಲ್ಕು ವರ್ಷಗಳಲ್ಲಿ ಭಾರತವು ಸಹಿಸಿದ ಕಷ್ಟ, ಅನುಭವಿಸಿದ ಅನುತಾಪ, ತೋರಿಸಿದ ಕೆಚ್ಚೆದೆ, ಪ್ರಕಟಿಸಿದ ಧೃತಿ ಸಾಧಿಸಿದ ಸಾಧನೆ ಇವು ಚರಿತ್ರಾರ್ಹವಾದವು. ಈ ಪರೀಕ್ಷಾ ಸಮಯದಲ್ಲಿ ಭಾರತೀಯರು ಕೆಚ್ಚೆದೆಯಿಂದ ಮುಂದೆ ಸಾಗಿದ ಪರಿಣಾಮವಾಗಿ ಇಂದು ಭಾರತವು ಭದ್ರ ತಳಪಾಯದಲ್ಲಿ ನಿಂತಿದೆ. ಅಂದಿನ ಅನಿಶ್ಚಿತ ಪರಿಸ್ಥಿತಿಯೂ, ಅಪಾಯಕಾರಕ ಗಂಡಾಂತರಗಳೂ, ದೂರ ಸರಿದು ಭವ್ಯ ಭವಿಷ್ಯವು ತೋರುತ್ತಿದೆ. ಆದರೂ ಕೆಲವು ಕುಳಗಳಲ್ಲುಪೆ ಇಲ್ಲ. ನೆರೆ ರಾಜ್ಯವಾದ ಪಾಕಿಸ್ತಾನವು ಕಾಶ್ಮೀರ ಸಮಸ್ಯೆಯನ್ನು ಎತ್ತಿ ಹಿಡಿದು ಭಾರತವನ್ನು ಯುದ್ಧಕ್ಕೆ ಆವ್ಹಾನಿಸುತ್ತಿದೆ. ಭಾರತವು ನೆಹರೂರವರ ಅದ್ವಿತೀಯ ಮುಂದಾಳ್ತನದಲ್ಲಿ ಪಾಕಿಸ್ತಾನದ ಕಹಿವಿಷ ಪ್ರಯೋಗವನ್ನು ತನ್ನ ಸಹಜ ಸಹಿಷ್ಣುತೆಗಳಿಂದ ಸಿಹಿಯಾಗಿ ಮಾರ್ಪಡಿಸಿ ಶಾಂತಿಯ ಸಂದೇಶವನ್ನು ಸಾರುತ್ತಿದೆ. ಈ ವರ್ಷದಲ್ಲಿ ಕಾಶ್ಮೀರ ಸಮಸ್ಯೆಯು ತೃಪ್ತಿಕರವಾಗಿ ಅಹಿಂಸಾ ರೀತಿಯಲ್ಲಿ ಬಗೆ ಹರಿಯಲೆಂಬುದು ಸರ್ವರ ಪ್ರಾರ್ಥನೆಯಾಗಿದೆ.

ಮತ್ತೆ ಕಾಂಗ್ರೆಸ್ ಮಹಾಸಂಸ್ಥೆಯೊಳಗೇ ಭಿನ್ನಾಭಿಪ್ರಾಯಗಳು ತಲೆದೋರಿ ಗಂಡಾಂತರದ ಚಿಹ್ನೆ ತೋರಿಬರುತ್ತಿದ್ದೆ. ಕಾಂಗ್ರೆಸಿನೊಳಗೆ ಸೇರಿರುವ ಹಲವು ಜನರ ನೀತಿಯು ತೃಪ್ತಿಕರವಾಗಿರಪೆ ಪಂಡಿತ ಜವಾಹರರಂಥವರೇ ಕಾಂಗ್ರೆಸಿನ ಅಧಿಕಾರ ಸ್ಥಾನಗಳನ್ನು ಬಿಡುವ ನಿರ್ಧಾರಮಾಡಿದ್ದಾರೆ. ಆದರೆ ಈ ಸಂದಿಗ್ಧ ಪರಿಸ್ಥಿತಿಯಲ್ಲಿ ಅವರು ದೇಶಹಿತವನ್ನು ಲಕ್ಷಿಸಿ ಕಾಂಗ್ರೆಸಿನಲ್ಲಿ ಉಳಿಯುವಂತಾಗಬೇಕಾದುದು ತೀರಾ ಅವಶ್ಯ. ಕಾಂಗ್ರೆಸಿನೊಳಗೆ ಇಂದು ನಡೆಯುತ್ತಿರುವ ಪಕ್ಷ ಸಮರ್ಥನೆ, ಸ್ವಾರ್ಥ ಸಂಕೀರ್ಣವಾದಗಳೇ ನೆಹರೂರಂಥವರಿಗೆ ಜಿಗುಪ್ಸೆ ಹಿಡಿಸಿದ್ದಾಗಿದೆ. ಆದ್ದರಿಂದ ಕಾಂಗ್ರೆಸು ನೆಹರೂರವರು ಆಸಿಸಿದಂತೆ ಈ ಸ್ವಾತಂತ್ರ್ಯ ವರ್ಷದಲ್ಲಿ ಶುದ್ಧಿಗೊಂಡು ಹಿರಿಯ ಘನತೆಯಿಂದ ಮತ್ತೊಮ್ಮೆ ಮೆರೆಯುವಂತಾಗಲಿ.

ಈ ವರ್ಷದ ಸ್ವಾತಂತ್ರ್ಯ ದಿನಾಚರಣೆಯು 'ಸಿ' ಭಾಗದ ಪ್ರಾಂತದ ಹಾಗೂ ಕೊಡಗಿನ ಜನರಿಗೆ ವಿಶೇಷ ಮಹತ್ವದ್ದಾಗಿದೆ. ಈ ದೃಷ್ಟಿಯಿಂದಲೇ ಈ ದಿನಾಚರಣೆಯು ಕೊಡಗಿನ ಹಲವು ಭಾಗಗಳಲ್ಲಿ ಬಹು ಸಂಭ್ರಮದಿಂದ ನಡೆಸಲ್ಪಟ್ಟಿತೆಂದು ತಿಳಿಯಬರುತ್ತದೆ. ನಾಲ್ಕು ವರ್ಷಗಳ ಹಿಂದೆ ಹಿಂದೂಸ್ಥಾನಕ್ಕೆ ಸ್ವಾತಂತ್ರ್ಯ ದೊರೆತು 'ಎ' ಮತ್ತು 'ಬಿ' ಭಾಗದ ಪ್ರಾಂತಗಳು ಜವಾಬ್ದಾರಿ ಸರಕಾರವನ್ನು ಅನುಭವಿಸುತ್ತಾ ಬರುತ್ತಿದ್ದರೂ 'ಸಿ' ಭಾಗದ ಪ್ರಾಂತ್ಯಗಳಿಗೆ ಯಾವ ರೀತಿಯ ಜನಪ್ರಿಯ ಸರಕಾರವನ್ನೂ ಏರ್ಪಡಿಸದಿದ್ದ ಕೊರತೆಯೊಂದು ಹಾಗೆಯೇ ಉಳಿದಿತ್ತು. ಪ್ರಧಾನ ಮಂತ್ರಿಯವರೇ ಮೊದಲಾದ ಜವಾಬ್ದಾರಿಯುತ ಮಹನೀಯರು ಈ ಲೋಪವನ್ನು ಹೋಗಲಾಡಿಸಲು ನಿಶ್ಚಯಿಸಿ ಈ ಪ್ರಾಂತಗಳಿಗೆ ಚುನಾವಣೆ ಕಳೆದ ಕೂಡಲೇ ಜವಾಬ್ದಾರಿ ಸರಕಾರವನ್ನು ಕೊಡಲು ತೀರ್ಮಾನಿಸಿರುವದು ತೃಪ್ತಿಕರ. ಈ ತೀರ್ಮಾನದಿಂದ ಸಂಬಂಧಿಸಿದ ಜನತೆಗೆ ಇಂಡಿಯಾ ಸರಕಾರದ ಮೇಲೆ ವಿಶ್ವಾಸವು ಹೆಚ್ಚಿದೆಯೆಂಬುದರಲ್ಲಿ ಸಂಶಯವಿಲ್ಲ. ಬರುವ ಸ್ವಾತಂತ್ರ್ಯ ದಿನಾಚರಣೆಯ ಒಳಗೆ 'ಸಿ' ಭಾಗದ ಪ್ರಾಂತಗಳೂ ಇತರ ದೊಡ್ಡ ಪ್ರಾಂತಗಳಂತೆ ಜವಾಬ್ದಾರಿ ಸರಕಾರವನ್ನು ನಡೆಸಿ ಜನತೆಯ ಹಿತವನ್ನು ಸಾಧಿಸುವರಾಗಿ ಆಶಿಸುತ್ತೇವೆ.

ವರ್ತಮಾನ.

ಹೊಸ ಏರ್ಪಾಡಿನಂತೆ ಕೊಡಗಿನ ಶಾಸನ ಸಭೆಯು ವಿಸ್ತರಿಸಲ್ಪಟ್ಟು ಆದರಲ್ಲಿ ೨೩ ಚುನಾಯಿತ ಸದಸ್ಯರುವರೆಂದು ತಿಳಿಯಬಂದಿದೆ.

ಪ್ಲಾನಿಂಗ್ ಕಮಿಷನಿನವರು ರೂಪಿಸಿರುವ ಪಂಚವಾರ್ಷಿಕ ಯೋಜನೆಯು ಮೇರೆ ಆ ಐದು ವರ್ಷಗಳ ಅವಧಿಯಲ್ಲಿ ಕೊಡಗಿಗೆ ೨೩ ಲಕ್ಷ ರೂಪಾಯಿಗಳು ದೇಶದ ಪುನರ್ರಚನೆಗಾಗಿ ಕೇಂದ್ರ ಸರಕಾರದಿಂದ ದೊರೆಯುವದೆಂದು ಗೊತ್ತಾಗಿದೆ.

ಡೇರಾಡನಿನ ಪ್ರಿನ್ಸ್‌ಆಫ್ ವೇಲ್ಸ್ ಮಿಲಿಟರಿ ಕಾಲೇಜಿಗೆ ವಿದ್ಯಾರ್ಥಿಗಳನ್ನು ಆರಿಸುವ ಪರೀಕ್ಷೆಯು ತಾರೀಕು ೧೫-೧೦-೪೭ರಲ್ಲಿ ಮಡಿಕೇರಿಯಲ್ಲಿ ನಡೆಯುವದೆಂದೂ ಕೊಡಗಿನ ವಿದ್ಯಾಧಿಕಾರಿಗಳು ಪರೀಕ್ಷೆ ನಡೆಸುವರೆಂದೂ ಅರ್ಜಿದಾರರು ತಾ. ೨೦-೧೧-೧೯೪೭ಕ್ಕೆ ೧೭ ವಯಸ್ಸಿನ ಒಳಗಿನವರಾಗಿರಬೇಕೆಂದೂ ಇಚ್ಛಿಸುವವರು ತಾ. ೧೫-೯-೪೭ ರೊಳಗೆ ಚೀಫ್ ಕಮಿಷನರ ಆಫೀಸಿನಲ್ಲಿ ದೊರೆಯುವ ನಿಶ್ಚಿತ ಫಾರಂನಲ್ಲಿ ದ್ವಿಪ್ರತಿಯಾಗಿ ಅರ್ಜಿಗಳನ್ನು ಚೀಫ್ ಕಮಿಷನರಿಗೆ ಬರೆದುಕೊಳ್ಳಬೇಕೆಂದೂ ತಿಳಿಯಬರುತ್ತದೆ.

ಹಿಂದೂದೇಶದ ಐದನೇ ಸ್ವಾತಂತ್ರ್ಯ ದಿನಾಚರಣೆಯು ತಾ. ೧೫ರಲ್ಲಿ ಮಡಿಕೇರಿ ಕೋಟೆಯ ಆವರಣದಲ್ಲಿ ನಡೆಯಿತು. ಸನ್ನೂರಂಭಕ್ಕೆ ಜನರು ತುಂಬಾ ಸೇರಿದ್ದರು. ಚೀಫ್ ಕಮಿಷನರು ೧೧ ಗಂಟೆಗೆ ಸರಿಯಾಗಿ ಧ್ವಜಾರೋಹಣ ಮಾಡಿದರು. ಪೊಲೀಸರ ಸೆಲ್ಯೂಟನ್ನು ಅವರು ಸ್ವೀಕರಿಸಿದರು.

ಹಾತೂರಿನ ಸಾರ್ವಜನಿಕರು ಸ್ವಾತಂತ್ರ್ಯ ದಿನಾಚರಣೆಯು ಪ್ರಯುಕ್ತ ಹಾತೂರು ಶಾಲೆಯಲ್ಲಿ ಶ್ರೀಮಾನ್ ಎಂ. ಎಂ ಸಂಜುಂಡನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿದರು. ಶ್ರೀಗಳಾದ ಕೆ. ಬಿ. ಸೋಮಯ್ಯ, ಕೆ. ಮೇದಪ್ಪ, ಟಿ. ಕೆ. ಭಟ್ಟ್, ಎ. ಟಿ. ನಾಣಯ್ಯ, ಟಿ. ಬಿ ಸುಬಯ್ಯ, ಎಚ್. ಬಿ. ಅಂಣಯ್ಯ, ಕೆ. ಬಿ. ಪೊನ್ನಪ್ಪ ಮತ್ತು ಎಂ. ಎಂ. ಪೂವಯ್ಯನವರು ಸ್ವಾತಂತ್ರ್ಯ ದಿನಾಚರಣೆಯ ಕುರಿತು ಭಾಷಣ ಮಾಡಿದರು.

ನಿವೃತ್ತ ಫಾರೆಸ್ಟರಾಗಿದ್ದ ಶ್ರೀ ಕುಲ್ಲಟ್ಟೀರ ಚಿಂಣಪ್ಪನವರು ತಮ್ಮ ೭೭ನೇ ವಯಸ್ಸಿನಲ್ಲಿ ತಾ. ೧೪ರಲ್ಲಿ ಶಿವಾಧೀನರಾದರು.

ವೈಕೂರಿನ ಪ್ರಧಾನ ಮಂತ್ರಿಯವರಾದ ಶ್ರೀ ಕೆ. ಚೆಂಗಲರಾಯ ರೆಡ್ಡಿಯವರು ತಾ. ೧೬ರ ಸಾಯಂಕಾಲ ಫ್ರೇಜರ್‌ಪೇಟೆಗೆ ಬಂದು ಚೀಫ್ ಕಮಿಷನರ ಅತಿಥಿಯಾಗಿರುವರೆಂದೂ ಮರುದಿನ ಅವರು ಮಡಿಕೇರಿಗೆ ಬರುವರೆಂದೂ ಆಗ ಸಾರ್ವಜನಿಕರು ಅವರಿಗೆ ಸ್ವಾಗತವನ್ನು ಕೊಡುವದಲ್ಲದೆ ಸರಕಾರವು ಒಂದು ಸತ್ಕಾರ ಕೂಟದ ಏರ್ಪಾಡನ್ನೂ ಮಾಡಿರುವರು.

ಶ್ರೀ ಚೇನಂಡ ಮಂದಣ್ಣನವರನ್ನು ನಾಪೋಕ್ಲು ನಾಡು ಪಾರುಪತ್ತೆಗಾರರಾಗಿಯೂ, ಶ್ರೀ ಚಂಡಿರ ಬೆಳ್ಯಪ್ಪನವರನ್ನು ಪೊನ್ನಂಪೇಟೆ ಸಬ್ ಟ್ರೆಜರಿ ಆಫೀಸರಾಗಿಯೂ, ಶ್ರೀ ಚನ್ನಿರಮಂದಪ್ಪನವರನ್ನು ಸೋಮವಾರಪೇಟೆ ಸಬ್‌ಟ್ರೆಜರಿ ಆಫೀಸರಾಗಿಯೂ, ಶ್ರೀ ಚೆಟ್ಟಂಡ ಗಣಪತಿಯವರನ್ನು ಕಾಲೇಜಿನ ಹೆಡ್ ಕ್ಲಾರ್ಕರಾಗಿಯೂ, ಶ್ರೀ ಎಂ. ಎಸ್. ಅನಂತಪದ್ಮನಾಭರವರನ್ನು ಪೋಲೀಸು ಆಫೀಸು ಹೆಡ್ ಕ್ಲಾರ್ಕರಾಗಿಯೂ ವರ್ಗಮಾಡಲಾಗಿದೆ.

ಕೃತಜ್ಞತೆಯ ಸಭೆಗಳು.

ಕೊಡಗನ್ನೊಳಗೊಂಡು ಚೀಫ್ ಕಮಿಷನರ್ ಪ್ರಾಂತಗಳಿಗೆಜವಾಬ್ದಾರಿ ಸರಕಾರ ಕೊಡುವ ಉದ್ದಿಶ್ಯ ಮಸೂದೆಯೊಂದನ್ನು ಪಾರ್ಲಿಮೆಂಟ್ ಸಭೆಯ ಮುಂದಿಡಲು ಇಂಡಿಯಾ ಸರಕಾರವು ಮಾಡಿರುವ ತೀರ್ಮಾನಕ್ಕೆ ತೃಪ್ತಿಯನ್ನು ಸೂಚಿಸಲಿಕ್ಕಾಗಿ ದೇಶದ ಹಲವು ಭಾಗಗಳಲ್ಲಿ ಸಾರ್ವಜನಿಕ ಸಭೆಗಳು ನಡೆದು ಠರಾವುಗಳನ್ನು ಪಾಸು ಮಾಡಿರುವರಲ್ಲದೆ ಇಂಡಿಯಾ ಸರಕಾರದ ಸಂಬಂಧಪಟ್ಟ ಮಂತ್ರಿಗಳಿಗೆ ತಂತಿ ಕೂಡ ಕಳುಹಿಸಲಾಗಿದೆಯೆಂದು ತಿಳಿಯಬರುತ್ತದೆ.

ಮೂರ್ನಾಡು.

ತಾ. ೯ರಲ್ಲಿ ಮೂರ್ನಾಡಿನ ಜನರು ಮೂರ್ನಾಡಿನಲ್ಲಿ ಸಭೆ ಕೂಡಿದ್ದರು. ಶ್ರೀ ಪಾಂಡಂಡ ಮುದ್ದಪ್ಪನವರು ಅಧ್ಯಕ್ಷರಾಗಿದ್ದರು. ಶ್ರೀ. ಪಿ. ಐ. ಬೆಳ್ಯಪ್ಪನವರು, ಎಂ. ಸಿ. ದೇವಯ್ಯ ಮತ್ತು ಕೆ. ಎಂ. ಪೊಣ್ಣಪ್ಪ ಇವರುಗಳು ಕೊಡಗಿನ ರಾಜಕೀಯ ಹೋರಾಟವನ್ನು ವಿವರಿಸಿ ಆದರ ಫಲಿತಾಂಶವಾಗಿ ಈಗ ಇಂಡಿಯಾ ಸರಕಾರವು ಇಲ್ಲಿಗೆ ಚುನಾಯಿತ ಮಂತ್ರಿಮಂಡಳಿಯನ್ನು ಕೊಡಲು ಮಾಡಿದ ತೀರ್ಮಾನವನ್ನು ಪ್ರಸಂಶಿಸಿ ಮಾತಾಡಿದರು. ನಂತರ ಈ ಕೆಳಗಿನ ಠರಾವು ಸರ್ವಸಮ್ಮತದಿಂದ ಮಂಜೂರಾಯಿತು.

'ಕೊಡಗನ್ನು ಒಳಗೊಂಡು ಚೀಫ್ ಕಮಿಷನರ್ ಪ್ರಾಂತ್ಯಗಳಿಗೆ ಚುನಾಯಿತ ನ್ಯಾಯವಿಧಾಯಕ ಸಭೆಯನ್ನು ಮತ್ತು ಅದಕ್ಕೆ ಜವಾಬ್ದಾರಿಯೂದ ಮಂತ್ರಿಮಂಡಳಿಯನ್ನು ಚುನಾವಣೆ ಕಳೆದ ನಂತರ ಕೊಡುವ ಉದ್ದಿಶ್ಯ ಮಸೂದೆಯನ್ನು ಪಾರ್ಲಿಮೆಂಟ್ ಸಭೆಯ ಮುಂದಿಡಲು ಇಂಡಿಯಾ ಸರಕಾರವು ಮಾಡಿದ ತೀರ್ಮಾನವು ಈ ಪ್ರಾಂತ್ಯದ ಜನರಿಗೆ ತುಂಬಾ ತೃಪ್ತಿಯನ್ನು ಉಂಟುಮಾಡಿದೆ. ಮತ್ತು ಆದಕ್ಕಾಗಿ ಈ ಸಭೆಯು ಇಂಡಿಯಾ ಸರಕಾರಕ್ಕೆ ತಮ್ಮ ಹೃತ್ಪೂರ್ವಕವಾದ ವಂದನೆಗಳನ್ನರ್ಪಿಸುತ್ತದೆ.'

ಸಿದ್ದಾಪುರ:

ಸಿದ್ದಾಪುರ ನಾಡಿನ ಜನರು ತಾ. ೧೫ರಲ್ಲು ಸಿದ್ದಾಪುರದಲ್ಲಿ ಶ್ರೀ. ಸಿ. ಎಂ. ಮುದ್ದಯ್ಯನವರ ಅಧ್ಯಕ್ಷತೆಯಲ್ಲಿ ಸಭೆ ಕೂಡಿದ್ದರು. ಈಗ ಇಂಡಿಯಾ ಸರಕಾರದವರು ಕೊಡಗಿಗೆ ಹಾಗೂ ಇತರ ಚೀಫ್ ಕಮಿಷನರ್ ಪ್ರಾಂತಗಳಿಗೆ ಸುಧಾರಣೆಯನ್ನು ಕೊಡಲು ಮಾಡಿರುವ ಮಸೂದೆಯ ತೀರ್ಮಾನವು ಹೇಗಾಯಿತೆಂಬುದನ್ನು ಶ್ರೀ. ಕೆ. ಟಿ. ಉತ್ತಪ್ಪ, ಪಿ. ಐ ಬೆಳ್ಯಪ್ಪ ಮತ್ತು ಐ. ಪಿ. ಕಾರ್ಯಪ್ಪನವರು ಸಾಂಗವಾಗಿ ವಿವರಿಸಿದರು. ನಂತರ ಮೇಲಿನ ಅರ್ಥದ ಠರಾವು ಪಾಸಾಯಿತು.

ಗೋಣಿಕೊಪ್ಪ

ತಾರೀಕು ೧೨ರಲ್ಲಿ ಗೋಣಿಕೊಪ್ಪಲ್ಲಿ ನಡೆದ ಸಾರ್ವಜನಿಕ-ವಿೂಟಿಂಗಿಗೆ ಶ್ರೀ. ಕೆ. ಎ. ಚಿಂಣಪ್ಪನವರು ಅಧ್ಯಕ್ಷರಾಗಿದ್ದರು. ಕೊಡಗನ್ನು ಪ್ರತ್ಯೇಕ ಪ್ರಾಂತವಾಗಿ ಇಟ್ಟುಕೊಂಡು ಸಂಪೂರ್ಣ ಜವಾಬ್ದಾರಿಯನ್ನು ಪಡೆಯಲು ಪ್ರತ್ಯೇಕ ಪಕ್ಷದವರು ಕೆಲವು ವರ್ಷಗಳಿಂದ ಮಾಡಿದ ಹೋರಾಟವನ್ನು ವಿವರಿಸಿ ಶ್ರೀಗಳಾದ ಕೆ. ಪಿ. ಕರುಂಬಯ್ಯ, ಬಿ. ಪಿ. ಬೋಪಯ್ಯ, ಎನ್. ಸಿ. ಚಿಂಣಪ್ಪ ಮತ್ತು ಸೋಮೆಯಂಡ ಅಚ್ಚಯ್ಯ ಇವರುಗಳು ಭಾಷಣ ಮಾಡಿದರು. ಆನಂತರ ಮೇಲ್ಕಾಣಿಸಿದ ಗೊತ್ತುವಳಿಯು ಮಂಜೂರಾಯಿತು.

ಸೋಮವಾರಪೇಟೆ

ಸೋಮವಾರಪೇಟೆನಾಡಿನ ಜನರು ತಮ್ಮದೊಂದು ಸಾರ್ವಜನಿಕ ಸಭೆಯನ್ನು ಈ ತಾ ೧೩ರಲ್ಲಿ ಸೋಮವಾರಪೇಟೆ ತಾಲೋಕು ಖಜೇರಿ ಮೈದಾನದಲ್ಲಿ ನಡೆಸಿದರು. ಶ್ರೀ ಡಿ. ಎಚ್. ದಾಸಪ್ಪನವರು ಅಧ್ಯಕ್ಷತೆ ವಹಿಸಿದ್ದರು. ಶ್ರೀಗಳಾದ ಎಚ್. ಟಿ. ಮಂತ್ತಂಣ, ಕೆ. ಟಿ ಉತ್ತಪ್ಪ ಸಿ. ಪೊನ್ನಪ್ಪ ಮತ್ತು ಪಿ ಐ ಬೆಳ್ಯಪ್ಪನರು ಕೊಡಗಿಗೆ ರಾಜಕೀಯ ಸುಧಾರಣೆ ದೊರೆಯಲು ಮಾಡಿದ ಪ್ರಯತ್ನ ಮತ್ತು ಕಾರಣಗಳನ್ನು ವಿವರಿಸಿ ಮಾತಾಡಿದ ಮೇಲೆ ಮೇಲಿನ ಅರ್ಥದ ಠರಾವು ಒಮ್ಮತದಿಂದ ಪಾಸಾಯಿತು.

ಅಮ್ಮತ್ತಿ

ಈ ತಾರೀಕು ೧೪ರಲ್ಲಿ ಅಮ್ಮತ್ತಿನಾಡಿನ ಜನರು ಅಮ್ಮತ್ತಿಯಲ್ಲಿ ಸಭೆಸೇರಿದ್ದರು. ಹಿಂದೂದೇಶಕ್ಕೆ ಸ್ವಾತಂತ್ರ್ಯ ದೊರೆತ ಮೇಲೆ ಕೊಡಗಿಗೂ ಪ್ರಜಾಜವಾಬ್ದಾರಿ ಸರಕಾರವನ್ನು ಪಡೆಯಲು ಇಲ್ಲಿಯ ಜನರು ಮಾಡಿದ ಚಳವಳಿಯನ್ನು ಕುರಿತು ವಿವರವಾಗಿ ಶ್ರೀಗಳಾದ ಕೆ. ಎಂ ಕುಶಾಲಪ್ಪ ಕೆ. ಟಿ. ಉತ್ತಪ್ಪ, ಪಿ. ಐ. ಬೆಳ್ಯಪ್ಪ ಮತ್ತು ಎನ್. ಎಂ. ಮೂಚಯ್ಯ ಇವರುಗಳು ಭಾಷಣ ಮಾಡಿದರು. ಅಂತ್ಯದಲ್ಲಿ ಮೇಲೆ ಕಾಣಿಸಿದ ರೀತಿ ಇಂಡಿಯಾ ಸರಕಾರಕ್ಕೆ ಕೃತಜ್ಞತೆಯನ್ನು ಸೂಚಿಸುವ ಠರಾವು ಸರ್ವಾನುಮತದಿಂದ ಪಾಸಾಯಿತು.

ನನ್ನೊಳಗಿನ ಭಾರತೀಯರು.

ಮೊನ್ನೆಯೂ ಸರಕಾರಿ ಕಾಲೇಜಿನ ಜೂನಿಯರ್ ಇಂಟರ್ ವಿಜ್ಞಾರ್ಥಿಗಳಿಗೆ ಕಾಲೇಜಿನ ಪ್ರಿನ್ಸಿಪಾಲರು ಒಂದು ಭಾಷಣವನ್ನಿತ್ತರು. ಅವರ ಉಪದೇಶವನ್ನು ಕೇಳುತ್ತಾ ಕೂತಿದ್ದ ನನಗೆ ಇವರು ನಿಜವಾಗಿಯೂ ಭಾರತೀಯರೇ, ಇವರು ನೆಹರೂ ಸರಕಾರದಡಿಯ ನೌಕರರೇ, ಎಂಬ ಸಂಶಯ ಬರುವಂತಾಯಿತು. ಅವರು ಹೇಳಿದರು—ವಿದ್ಯಾರ್ಥಿಗಳು ಟಿಪ್‌ಟಾಪಾಗಿ ಪ್ರೊಫೆಷಿಯೆಂಟ್ ಆಗಿ ಬರಬೇಕು. ಬೀಡಿಯ ಭಿಕ್ಷುಕರಂತೆ ಜುಬ್ಬ ಪಂಚೆಗಳಲ್ಲಿ ಬರುವದಲ್ಲ ಎಂಬಂ. ಜುಬ್ಬ ಪೈಜಾಮ, ಧೋತಿ ಹಾಕಿಕೊಳ್ಳುವ ಭಾರತೀಯ ಡ್ರೆಸ್ಸು ಇವರಿಗೆ ಭಿಕಾರಿಗಳ ಡ್ರೆಸ್ ಆಗಿದೆ. ಇವರ ಕಣ್ಣಿಗೆ ಓಭೀರಾಯನ ಡಬ್ಬಲ್, ಬ್ರೆಸ್ಟ್‌ಕೋಟು, ಮೋಜಾದ ಟ್ರೌಸರುಗಳು, ಸೊಟ್ಟ ಫೆಲ್ಟ್‌ಹೇಟು ಇದೇ ನಾಗರಿಕತೆಯ ಉಡುಪು ಕೇಪು ಸರ್ಕಸ್ ಮೇನೇಜರುಗಳಿಗೊಪ್ಪುವ ಈ ಡ್ರೆಸ್ಸೇ ಕಾಲೇಜು ವಿದ್ಯಾರ್ಥಿಗಳಿಗೂ ಯೋಗ್ಯವೇ? ಕಾಲೇಜು ಸರ್ಕಸ್ ಭವನವಲ್ಲ. ನೆಹರೂ ಸರಕಾರದ ಅಡಿಯಲ್ಲಿ 'ಜೀ ಹಜೂರ್' ಎಂದು ಬದುಕುತ್ತಿರುವ ನೌಕರರ ಬಾಯಿಂದ ಹೊರಡಬೇಕಾದ ಮಾತೇ ಇದು? ತಮ್ಮ ದೇಶದ ಸಂಸ್ಕೃತಿ ನೀತಿಗಳಲ್ಲಿ, ಉಡಿಗೆ ತೊಡಿಗೆಗಳಲ್ಲಿ ವಿಶ್ವಾಸವಿಲ್ಲದ, ಅವುಗಳ ಉಪಯುಕ್ತತೆಯನ್ನೂ ಅರಿಯದ ನಮ್ಮೊಳಗಿನ ಈ ವಿದೇಶೀಯರನ್ನು ನೆನೆದಾಗ ಪಾಪವೆನಿಸುತ್ತದೆ ಇಂಥಾವರ ಪತೋಟಿಯಲ್ಲಿರುವ ಸಂಸ್ಥೆಗಳ ದುರ್ಭಾಗ್ಯವನ್ನು ನಿವರಿಸುವವರಾರು? "ವಿದ್ಯಾರ್ಥಿ"

ಸುಬೆದಾರರ ಹುದ್ದೆ.

ಸುಬೇದಾರರ ಹುದ್ದೆಯೊಂದು ಖಾಲಿ ಇದೆ. ಅದಕ್ಕೆ ಅರ್ಹರಾದ ಹಲವಾರು ಜನರಿದ್ದಾರೆ. ಕೆಲವರು ಸರ್ವಿಸಿನ ಪ್ರಕಾರ ಅರ್ಹರಾಗಿದ್ದರೆ ಕೆಲವರು ದಕ್ಷತೆಯಿಂದ ಅರ್ಹರಾಗಿದ್ದಾರೆ. ಹಾಗಿರುವಾಗ ಈ ಹುದ್ದೆಯನ್ನು ಭರ್ತಿ ಮಾಡುವಾಗ ಅರ್ಹರಾದವರ ಹಕ್ಕನ್ನು ವಿಮರ್ಶಿಸಿ ಸರ್ವದೃಷ್ಟಿಯಿಂದ ಯೋಗ್ಯರೆನಿಸಿದವರಿಗೆ ಕೊಡಬೇಕು. ಅನರ್ಹರಾದವರಿಗೆ ಈ ಕಾರಣ ಯೂ ನ್ಯೂನತೆಗಳಿಂದ ಅನರ್ಹರೆಂದು ತಿಳಿಸಬೇಕು. ಇಂದು ಅರ್ಹರೆಂದು ಹೇಳಿಕೊಳ್ಳುವವರೆಲ್ಲರೂ ಆ ಕೆಲಸಕ್ಕೆ ಅರ್ಹರಿರಲಾರರು. ಕೆಲವರು ದಕ್ಷರಿಲ್ಲದಿರಬಹುದು. ಕೆಲವರೂ ಕೆಟ್ಟ ಅಭ್ಯಾಸಗಳಿಗೆ ಬಿದ್ದು ಅಧಿಕಾರವ ಹುರುಪಯೋಗ ಮಾಡುವವರಿರಬಹುದು. ಆದರೆ ಅಂಥಾವರಿಗೆ ಅವರ ನ್ಯೂನತೆಯನ್ನು ಸರಕಾರವು ಎತ್ತಿ ತೋರಿಸಿ ಅವರ ಅನರ್ಹತೆಯನ್ನು ಅವರಿಗೆ ತಿಳಿಸಬೇಕು. ಇದನ್ನು ತೋರ್ಪಡಿಸದೆ ಬೇರೆ ಯೋಗ್ಯರನ್ನು ಆರಿಸಿದರೂ ಅತೃಪ್ತಿಗೆ ಕಾರಣವಾಗುತ್ತದೆ.

ಇತ್ತಲಾಗಿ ಸುಬೆದಾರರ ಹುದ್ದೆಯನ್ನು 'ಸಿಲೆಕ್ಷನ್ ಪೋಸ್ಟ್' ಆಗಿ ಮಾಡಿರುವರೆಂಬುದು ಖಂಡನೀಯ. ಸರಕಾರದಲ್ಲಿ ದುಡಿಯುವ ಯೋಗ್ಯರಿಗೆ ಒಂದು. ಆಸೆಯೆಂದರೆ ದಕ್ಷತೆಯಿಂದ ದುಡಿದರೆ ಸುಬೆದಾರರಾಗಿ ನಿವೃತ್ತರಾಗಬಹುದೆಂದು ಈಗ ಆ ಹುದ್ದೆಯು 'ಸಿಲೆಕ್ಷನ್' ಪೋಸ್ಟ್' ಎಂದರೆ ಇಲಾಖೆಯಲ್ಲಿ ಕೆಲಸ ಮಾಡುವವನಿಗೆ ತುಂಬಾ ಅನ್ಯಾಯ ಮಾಡಿದಂತೆ ಸರಕಾರದವರು ಈ ಹುದ್ದೆಯನ್ನು 'ಸಿಲೆಕ್ಷನ್ ಪೋಸ್ಟು' ಆಗಿ ಮಾಡಕೂಡದು. ಇಂತಹಂಥ ಉದ್ಯೋಗಿಗಳಲ್ಲಿ ಅನಾಸಕ್ತಿಯೂ, ಅಪ್ರಾಮಾಣಿಕತೆಯೂ ತಲೆದೋರುವದರಲ್ಲಿ ಸಂಶಯವಿಲ್ಲ.

ಸಾರ್ವಜನಿಕ.

ಪುಂಬರುವ ಸಾರ್ವತ್ರಿಕ ಚುನಾವಣೆ.

ಇತ್ತೀಚೆಗೆ ಹಲವು ಪತ್ರಿಕೆಗಳಿಂದ ಚುನಾವಣೆಯು ಜನವರಿ ತಿಂಗಳಲ್ಲಿ ನಡೆಯುತ್ತದೆಂದು ತಿಳಿದು ಬರುತ್ತಿದೆ. ಇದೇ ರೀತಿ ಕೊಡಗಿನಲ್ಲಿಯೂ ಚುನಾವಣೆ ಜನವರಿ ತಿಂಗಳಿಗೆ ನಡೆಯಬಹುದು. ಆ ಸಮಯದಲ್ಲಿ ಭತ್ತದ ಪೈರು ಕಟಾವು ಮತ್ತು ಶೇಖರಿ ಮಾಡುವ ಸಮಯ. ಈ ಸಮಯದಲ್ಲಿ ಓಟುಮಾಡಲು ಹಳ್ಳಿಗಳಿಂದ ರೈತರು ಬರುವುದು ಬಹಳ ಕಡಿಮೆ. ಕೇವಲ ಒಂದು ಓಟಿಗಾಗಿ ತಮ್ಮ ಅಮೂಲ್ಯವಾದ ಸಮಯವನ್ನು ರೈತರು ಕಳೆದುಕೊಳ್ಳಲು ಇಷ್ಟಪಡುವುದಿಲ್ಲ. ಆದ್ದರಿಂದ ಚುನಾವಣೆಯು ಈ ಮೊದಲೇ ಪ್ರಸಿದ್ಧವಾದಂತೆ ನವಂಬರು ತಿಂಗಳ ಕೊನೆವಾರದಲ್ಲಿ ನಡೆಸುವುದು ವಿಹಿತವಿದೆ. ಈ ಸಮಯದಲ್ಲಿ ಹುಳಿ ಕಡಿಮೆ. ವ್ಯವಸಾಯದ ಕುರಿತು ಕೆಲಸವಿರುವುದಿಲ್ಲ. ರೈತರಿಗೂ ಬಂದಿರುವ ಬೆಳೆ ನೋಡಿ ಸಂತೋಷದಿಂದಿರುವ ಸಮಯ. ಆದ್ದರಿಂದ ಕೊಡಗಿನ ಚೀಫ್ ಕಮಿಷನರವರು ಈ ಸಮಯದಲ್ಲೇ ಚುನಾವಣೆ ನಡೆಸಲು ಕೇಂದ್ರ ಸರಕಾರದ ಅನುಮತಿ ಪಡೆಯುವುದು ಒಳ್ಳೆಯದು. ಇದು ಬಿಟ್ಟು ಚುನಾವಣೆಯನ್ನು ಮುಂದೆ ಮುಂದೆ ಹಾಕುತ್ತಾ ಹೋಗುವುದು ವಿಹಿತವಲ್ಲ ಚುನಾವಣೆ ಮುಂದೆ ಹಾಕುತ್ತಿರುವುದಕ್ಕೆ ಈಗಾಗಲೇ ಹಲವು ಪಾರ್ಟಿಗಳು ಹಿಂದೂಸ್ಥಾನದಲ್ಲಿ ತಮ್ಮ ನಿಷೇಧ ಸೂಚಿಸಿವೆ. ಮುಂಬರುವ ಕಾಲವಾದರೂ ಒಳ್ಳೆಯ ಕಾಲವೆಂದು ಹೇಳಲು ಬರುವುದಿಲ್ಲ. ಆದ್ದರಿಂದ ಆದಷ್ಟು ಬೇಗನೇ ಸಾರ್ವತ್ರಿಕ ಚುನಾವಣೆ ನಡೆಯುವುದು ಒಳ್ಳೆಯದು. ಆದರಲ್ಲೂ ಕೊಡಗಿನ ಚುನಾವಣೆ ನವಂಬರು ಕೊನೆವಾರದಲ್ಲಿ ನಡೆಯುವುದು ಒಳ್ಳೆಯದಾಗಿದೆ.

ಎನ್. ಕೆ. ಮೂರ್ತಿ.

ಕೊಡಗಿನಲ್ಲಿರುವ ಸೇತುವೆಗಳು.

ಕೊಡಗು ದೇಶವನ್ನು ಬ್ರಿಟಿಷರು ಪಡೆದಾಗ ಕಟ್ಟಿಸಿದ ಸಿದ್ದಾಪುರ ಮತ್ತು ಫ್ರೇಜರ್‌ಪೇಟೆ ಸೇತುವೆಗಳಲ್ಲದೆ ಇತ್ತೀಚೆಗೆ ಕಟ್ಟಿದ ಉತ್ತಮ ಸೇತುವೆಗಳೇ ಇಲ್ಲವೆಂದರೆ ಅತಿಶಯೋಕ್ತಿಯಾಗಲಾರದು.

ಈಗಿನ ವ್ಯಾಪಾರ, ಜನರ ತಿರುಗಾಟಗಳನ್ನು ಗಣನೆಗೆ ತೆಗೆದುಕೊಂಡರೆ ರಸ್ತೆ ಮತ್ತು ಅದಕ್ಕೆ ಇರುವ ಸೇತುವೆಗಳೇ ದೇಶದ ನರನಾಡಿಗಳು.

ಈಗ ಅವಶ್ಯವಿರುವ ಸೇತುವೆಗಳನೇಕ ಇವೆ. ಶಾಲೆ, ಆಸ್ಪತ್ರೆ ಅವಶ್ಯ. ಆದರೆ ಸೇತುವೆ ಮತ್ತು ನೀರಾವರಿ ಅದಕ್ಕಿಂತ ಅವಶ್ಯವೆಂದು ಕೇಂದ್ರ ಸರಕಾರವು ಹೇಳುತ್ತಿದೆ—ಮಾಡುತ್ತಿದೆ.

ಕೂಡ್ಲೂರು, ಬೇತರಿ ಮತ್ತು ಕೊಟ್ಟಮುಡಿ ಸೇತುವೆಗಾಗಿ ಮುಳಿಗಾಲಬಲ್ಲಿ ದೊಡ್ಡ ಉದ್ಯೋಗಸ್ಥರು ಹೋಗದ್ದರಿಂದ ಇದು ಆಗದೆ ಉಳಿದಿದೆ. ಪ್ಲಾನು, ಎಸ್ಟಿಮೇಟು ಹತ್ತು ವರ್ಷಕೊಂದುದಪ್ಪ ಹತ್ತು ಬಾರಿ ಆಗಿರಬಹುದು.

ಈ ಸೇತುವೆಗಳು ಆಗದೆ ಇರಲು ಕಾರಣ ಸೇತುವೆಯು ಅವಶ್ಯವಿರುವದು ಬಡ ಜನರಿಗೆ! ಅತನು ಅದರ ಪ್ರಯೋಜನ ತಿಳಿಯದೆ ಇರುವುದು ಒಂದು ಕಾರಣ. ಗುಡಿಸಿಲಲ್ಲಿ ವಾಸಮಾಡಿ ಅಭ್ಯಾಸ ಇರುವವನಿಗೆ ಉತ್ತಮವಾದ ಮನೆ ಹಿಡಿಯುವದಿಲ್ಲವಂತೆ!

ಸೇತುವೆಗಳಾದರೆ ಉದ್ಯೋಗಸ್ಥರಿಗೆ ಟಿ. ಎ. ಸಿಕ್ಕುವುದು ಕಮ್ಮಿಯಾಗುತ್ತೆ!

ಸೇತುವೆಗಳಿಗೆ ಹಣ ಹಾಕಿದರೆ ಪಟ್ಟಣದಲ್ಲಿರುವ ಆಸ್ಪತ್ರೆ–ಹೈಸ್ಕೂಲುಗಳಿಗೆ ಹಣ ಉಳಿಯುವುದಿಲ್ಲ. ಹಾಗಾದರೆ ಏನು ಮಾಡಬೇಕು?

ಆಯೂಯು ಊರಿಗೆ ಸಂಬಂಧಪಟ್ಟವರು ಈ ಸೇತುವೆಗಳಾದರೆ ಜನರಿಗಾಗುವ ಪ್ರಯೋಜನವನ್ನು ಮನವಿಮಾಡಿ ಸರಕಾರದೊಡನೆ ಹೋರಾಡಬೇಕು. ಈಗ ಶಾಲೆ ಆಸ್ಪತ್ರೆ ಮೊದಲಾದುವಕ್ಕೆ ಜನರು ಹಣ ಹಾಕುವಂತೆ ಐಶ್ವರ್ಯವಂತರೂ ಬಡಪಟ್ಟಿನ್ನದೆ ವಂತಿಗೆ ಎತ್ತಿದರೆ ಉಳಿದುದನ್ನು ಸರಕಾರದಿಂದ ಹಾಕಿಸಬಹುದು. ಮೈಸೂರಿನಲ್ಲಿ ಈ ಕ್ರಮವು ಜಾರಿಗೆ ಬಂದಿದೆ. ಅಲ್ಲದೆ ಖರ್ಚು ಮಾಡಿದ ಜನರ ಹಣ ಹುಟ್ಟುವ ವರೆಗೆ ಗಾಡಿ ಕಾರುಗಳಿಗೆ ಸುಂಕ ಹತ್ತುತ್ತಾತೆ. ಮಡಿಕೇರಿಯಿಂದ ಮುಳಿಗಾಲದಲ್ಲಿ ವೀರರಾಜಪೇಟೆಗಾಗಲೀ ನಾಪೋಕ್ಲಿಗಾಗಲಿ ಹೋಗಲು ಖರ್ಚು ಎಷ್ಟಾಗುವುದು ಸೇತುವೆಯಾದರೆ ಪ್ರತಿ ಒಬ್ಬನಿಗೆ ಉಳುವರಿ ಎಷ್ಟಾಗುವುದು?

ಸರಸ್ವತಿ.

ನಾಪೋಕ್ಲು ಹೈಸ್ಕೂಲು ವಿದ್ಯಾರ್ಥಿ ನಿವಾಸ ಗೃಹ.

ನಾಪೋಕ್ಲು ಹೈಸ್ಕೂಲಿನ ಕೆಲಸ ಸುಸೂತ್ರವಾಗಿ ನಡೆಯುತ್ತಿದೆ. ಆದರೆ ವಿದ್ಯಾರ್ಥಿ ನಿವಾಸ ಗೃಹದ ವ್ಯವಸ್ಥೆ ಚೆನ್ನಾಗಿಲ್ಲವೆಂದು ಹೇಳಬೇಕಾಗಿದೆ. ನಿವಾಸ ಗೃಹಗಳಲ್ಲಿ ಪಾರುಪತ್ಯಗಾರರಾಗಿ ನೇಮಕವಾಗುವವರು ಕೇವಲ ವಿದ್ಯಾರ್ಥಿಗಳ ಊಟ ವ್ಯವಸ್ಥೆ ಮಾಡಿದರೆ ಸಾಲದು. ಅವರು ವಿದ್ಯಾರ್ಥಿಗಳ ಒಡನಾಡಿಯಾಗಿ ಅವರ ಬೇಕು-ಬೇಡಿಕೆಗಳನ್ನು ತಿಳಿದವರಾಗಿ, ತಪ್ಪಿದವರನ್ನು ತಿದ್ದಲು ಶಕ್ತರಾಗಿ ಇರಬೇಕು. ಹೀಗೆ ಆದಬೇಕಾದರೆ ಮಕ್ಕಳ ಮನೋಭಾವವನ್ನು ತಿಳಿಯಲಾರದ ವಯಸ್ಸಿಗರು ಪಾರುಪತ್ಯಗಾರರಾದರೆ ಆಗದು. ನಾವ್ಹೋಕ್ಲಿನಲ್ಲಿ ಹಾಗಾಗಿದೆ. ಅವರಿಗೂ ವಿದ್ಯಾರ್ಥಿಗಳಿಗೂ ಇರುವ ಅಂತರ ಬಹುವಾಗಿದೆ. ಇವರು ಹಳಬವಾದಿಗಳಾಗಿ. ವಿದ್ಯಾರ್ಥಿಗಳನ್ನು ಬಲಪ್ರಯೋಗದಿಂದ ಬಗ್ಗಿಸಲೆತ್ನಿಸುವರೆಂದೂ ಪರಿಣಾಮವಾಗಿ ಬೋರ್ಡಿಂಗಿನಲ್ಲಿ ಗಲ್ಲಾಟೆ ಹೆಚ್ಚಾಗುತ್ತಿದೆಯೆಂದೂ ತಿಳಿದು ಬಂದಿದೆ. ಸಂಬಂಧಿಸಿದ ಅಧಿಕಾರಿಗಳು ಈ ನಿವಾಸ ಗೃಹದ ಕಾರ್ಯಕಲಾಪಗಳನ್ನೂ, ಬೋರ್ಡಿಂಗ್ ಪಾರುಪತ್ಯಗಾರರ ರೀತಿನೀತಿಯನ್ನೂ ಪರಿಶೀಲಿಸುವರೇ?

ಮಕ್ಕಳ ತಂದೆ.

ಹರಿಜನ ಸೇವಕ ಸಂಘ.

'ಕೊಡಗು' ಪತ್ರಿಕೆಯ ತಾ. ೩-೮-೨೧ ರ ಸಂಚಿಕೆಯಲ್ಲಿ 'ಹರಿಜನರ ಎಡರು ತೊಡರುಗಳು' ಎಂಬ ಲೇಖನವನ್ನು ಓದಿ ಬಹಳ ವ್ಯಸನವಾಯಿತು. ಈ ರೀತಿಯ ತೊಂದರೆಗಳು ಕೊಡಗಿನ ಹರಿಜನರಿಗೆ ಮಾತ್ರವಲ್ಲ, ಭರತಖಂಡದ ಎಲ್ಲಾ ಕಡೆಗಳಲ್ಲಿರುವವರಿಗೂ ಇದ್ದೇ ಇದೆ. ಇವುಗಳನ್ನು ಸುಸಜ್ಜಿತ ಕಾರ್ಯಕ್ರಮಗಳಿಂದ ಪರಿಪಡಿಸಿಕೊಳ್ಳಬೇಕು. ಹರಿಜನರ ಸುಧಾರಣೆಗಳನ್ನು ಇತರ ಹಿಂದುಗಳು ಕಾರ್ಯರೂಪಕ್ಕೆ ತರಲು ಪ್ರಯತ್ನ ಪಡುತ್ತಿರುವುದೂ ಸರಿಯಿದೆ. ಇಂಥಾ ಸುಧಾರಣೆಗಳನ್ನು ಕಾರ್ಯರೂಪಕ್ಕೆ ಇಳಿಸಲು ಬಂದು ಸಂಘವು ಅಗತ್ಯ ಕೆಲಸಕಾರ್ಯಗಳನ್ನು ನಡೆಸಿಕೊಂಡು ಬರಲು ಕಾರ್ಯಕರ್ತರು ಇಲ್ಲದ್ದರಿಂದ ಈ ವರೆಗೂ ಈ ಕಾರ್ಯವು ಮುಂದುವರಿಯದೆ ನಿಂತಿದೆ. ಇದು ಬಹಳ ವಿಷಾದಕರ.

ನಮ್ಮ ಕೊಡಗಿನ ಹರಿಜನರ ಸೇವೆಯನ್ನು ಮಾಡಿ ಅವರನ್ನು ಸುಧಾರಿಸಿ ಮುಂದಕ್ಕೆ ತರುವುದು ಸವರ್ಣ ಹಿಂದುಗಳ ಕರ್ತವ್ಯವಾಗಿದೆ. ಇಂಥಾ ಸುಕಾರ್ಯಗಳಲ್ಲಿ ರಾಜಕೀಯ ತತ್ವಗಳ ಹೋರಾಟಕ್ಕೆ ಎಡೆಯಿರಬಾರದು. ಹರಿಜನರ ಒಂದೆರಡು ಸಂಘಗಳು ಅಲ್ಲಲ್ಲಿ ಹುಟ್ಟಿ ಪಾರ್ಟಿಪಂಗಡದ ಕೈವಾಡದ್ದಿಂದ ಮೂಲೆಪಾಲಾಗಿದೆ. ಇದು ಶೋಚನೀಯಕರವಾದ ಸಂಗತಿ.

ಕೊಡಗಿನಲ್ಲಿರುವ ಹರಿಜನರ ಹಿತಚಿಂತಕರು ಮತ್ತು ಹರಿಜನರು ಒಗ್ಗೂಡಿ ಸಂಘಟಿತವಾದ ಸಂಸ್ಥೆಯನ್ನು ಸ್ಥಾಪಿಸಿಕೊಂಡು ಈ ಕಾರ್ಯವನ್ನು ಮಾಡುವುದು ಯೋಗ್ಯವಾಗಿದೆ. ರಾಜಕೀಯ ಮುಂದಾಳುಗಳ ಕೈ ಇದರಲ್ಲಿರಬಾರದು. ಇದ್ದರೂ ಅವರು ನಿಷ್ಪೆಕ್ಷಪಾತವಾಗಿ ಹರಿಜನರ ಸೇವೆಗೆ ಬದ್ಧ ಕಂಕಣರಾಗಿರುವವರಾಗಿರಬೇಕು. ಇಂಥಾ ಸಂಸ್ಥೆಯು ಈ ಕೆಳಗಿನ ಧೈರ್ಯಗಳನ್ನಿಟ್ಟುಕೊಂಡು ಕೆಲಸ ಮಾಡಬೇಕು.

೧. ಹರಿಜನರ ಸಂಘಟನೆ ಹಕ್ಕು-ಬಾಧ್ಯತೆಗಳ ಕಾರ್ಯವಿಧಿ.

೨ ವಿದ್ಯಾಪ್ರಸಾರವನ್ನು ನಡೆಸಲು ಉಚಿತ ವಸತಿ ಗೃಹಗಳನ್ನು ನಡೆಸುವುದು

೩. ಹರಿಜನರಿಗೆ ಪಾಪಕ್ಕೆ ಮನೆಗಳನ್ನು ಜಾಗದಳನ್ನು ಪಡಗಿಸಿ, ತಕ್ಕ ಭೂಸುಧಾರಣೆಗಳನ್ನು ಜಾರಿಗೆ ತರಲು ಪ್ರಯತ್ನಿಸುವುದು.

ಆದರ್ಶ ಧುರೀಣರು.

ಲೇ:–ಮೂ. ವರ್ಧಮಾನ ಹೆಗ್ಗಡೆ, ಧರ್ಮಸ್ಥಳ.

ಅಜ್ಞಾನಿ ಜನತಾ ಸಮೂಹದಲ್ಲಿರುವುದನ್ನು ನೋಡಿ ಅವರ ಕಷ್ಟ ದುಃಖ ಪರಿಹರಿಸಲು ನಿರಂತರ ಪ್ರಯತ್ನಿಸುವ ಸುಶಿಕ್ಷಿತ ಸಮಾಜ ಪ್ರಮುಖರು ಲೋಕದಲ್ಲಿ ಬಹಳ ವಿರಳ. ಸ್ವಪ್ರತಿಷ್ಠೆ ಅಧಿಕಾರಲಾಲಸೆಯಿಂದ ಲಾಗಹೊಡೆಯುವ ಧುರೀಣರು ಬೇಕಾದಷ್ಟು ಮಳೆಕಾಲದ ಕ್ರಿಮಿಗಳಂತೆ ಅಲ್ಲಲ್ಲಿ ತಲೆ ಎತ್ತಬಹುದು. ಆದರ್ಶ ಧುರೀಣರ ಉನ್ನತ ವ್ಯಕ್ತಿತ್ವವೇ ಬಹಳ ಪವಿತ್ರವಾಗಿರುವುದು. ಅವರು ನಿಷ್ಕಾಮ ಕರ್ಮಿಗಳು. ಸ್ವಾರ್ಥನೂನಗಳಿಗಾಗಿ ಮುಂದೆ ನುಗ್ಗುವವರಲ್ಲ. ತ್ಯಾಗ ಸೇವಾ ಕಾರ್ಯವು ಅತ್ಯಂತ ಪುನೀತವಾಗಿದೆ. ದೀನ ಹೀನ ದುಃಖ ಜೀವಿಗಳ ಯಥಾಶಕ್ತಿ ಸೇವೆ ಮಾಡುವುದರಿಂದ ತನ್ನ ಜನ್ಮವು ಸಫಲವಾಗುವುದು ಎಂಬ ತತ್ವವು ಅವರಿಗೆ ಜೀವಾಳವಾಗಿದೆ. ಹಂಚಭೂತಮಯವಾದ ಪ್ರಕೃತಿಯೇ ಲೋಕೋಪಕಾರಿಯಾಗಿದೆ. ನೀರು, ಮರಗಿಡಗಳು ಪಶುಪಕ್ಷಿಗಳು ಕೂಡ ಲೋಕೋನ್ನತಿಗೆ ಸಹಾಯಕವಾಗಿವೆ. ಹಾಗಿರುವಾಗ ಮನುಷ್ಯನು ವಿಚಾರಪರನಾಗಿಯೂ ಸ್ವಾರ್ಥಿಯಾಗಿರುವುದು ಅವಿವೇಕಕ್ಕೆ ಲಕ್ಷಣ. ನಿಜವಾದ ಧುರೀಣರು ಜಡ ಜಕ್ಕಸಮೂಹದ ತಾತ್ಕಾಲಿಕ ಸಂಕಷ್ಟಗಳಾವುವು ಎಂಬುದನ್ನು ಸೂಕ್ಷ್ಮವಾಗಿ ವಿವರ್ಶಿಸಿ ನೋಡುವರು. ಅವುಗಳನ್ನು ಕೈಲಾದ ಮಟ್ಟಿಗೆ ದೂರಪಡಿಸಲು ಪ್ರಯತ್ನಿಸುವರು. ಅವರ ಅವ್ಯಕ್ತ ಭಾವನೆಗಳನ್ನು ಪ್ರತಿನಿಧಿಯೂಗಿ ವ್ಯಕ್ತಮಾಡುವರು. ಅವರ ನಿರಾಕಾರ ಭಾವನೆಗೆ ಆಕಾರ ಕೊಡುವರು. ಜನತೆಯು ತಮ್ಮ ಉನ್ನತಿಗಾಗಿ ನಿಷ್ಕಾಮ ಸೇವೆ ಸಲ್ಲಿಸಲು ಮುಂಚೆ ನುಗ್ಗಿರುವ ಧುರೀಣರನ್ನು ಪ್ರೇಮ ವಾತ್ಸಲ್ಯದಿಂದ ಕಾಣುವರು. ತಮ್ಮ ಸಂಕಷ್ಟಗಳನ್ನೆಲ್ಲಾ ಸ್ಪಷ್ಟವಾಗಿ ಹೇಳಿಬಿಡುವರು. ಧುರೀಣರ ಆಜ್ಞೆಯಂತೆ ನಡೆಯಲು ಪ್ರಯತ್ನಿಸುವರು. ಜನತೆಯ ಹೃದಯದ ಆಶೆ ಆಕಾಂಕ್ಷೆಗಳೇನೆಂಬುದನ್ನು ಸ್ಪಷ್ಟವಾಗಿ ಲೋಕದ ಮುಂದೆ ಅಡುವ ನಿರ್ಭೀತ ಧುರೀಣರು ವಿಶೇಷ ಪ್ರಸಿದ್ಧಿ ಪಡೆವರು. ಜೈನದ ಸ್ವರ್ಗೀಯ ಡಾಕ್ಟರ್ ಸನ್ಯತ್ ಸೇನರು, ಪೂಜ್ಯ ಮಹಾತ್ಮಾ ಗಾಂಧೀ, ಸ್ವಾಮಿ ವಿವೇಕಾನಂದ ಮೊದಲಾದ ವಿಶ್ವವಿಖ್ಯಾತ ಪುಣ್ಯಪುರುಷರು ಜನತೆಯ ಹೃದಯದ ಮೇಲೆ ತಮ್ಮ ಆದರ್ಶ ಜೀವನದ ಪ್ರಭಾವವನ್ನು ಜೆನ್ನಾಗಿ ಬೀರಿದ್ದರು. ಆದರಿಂದಾಗಿ ಜನತಾ ಸಮೂಹವು ಅವರು ಹೇಳಿದಂತೆ ಕೇಳುತಿತ್ತು.

ತನ್ನ ಸ್ವಂತ ಯಾವುದೊಂದು ಸ್ವಾರ್ಥವಿಲ್ಲದೆ ಜನತಾ ಸಮೂಹದ ಹಿತಕ್ಕಾಗಿ ಧುರೀಣರು ನಾನಾ ಸಂಕಷ್ಟಗಳಿಗೆ ತಲೆಯೊಡ್ಡುತ್ತಿದ್ದಾರೆಂಬುದನ್ನು ಜನತೆಯು ಜೆನ್ನಾಗಿ ತಿಳಿಯುತ್ತಲೇ ತಮ್ಮ ಧುರೀಣರ ವಿಷಯವಾಗಿ ಪ್ರೀತಿ ವಿಶ್ವಾಸಗಳು ಬೆಳೆಯುತ್ತಾ ಹೋಗುವುದು. ಸಹಾನುಭೂತಿಯೂ ಹೆಚ್ಚುವುದು. ಶ್ರೇಷ್ಠ ವೈದ್ಯನ ಚಿಕಿತ್ಸೆ ಮೂಲಕ ತಮ್ಮ ಭಯಂಕರ ರೋಗವು ದೂರವಾಗುತ್ತಲೇ ಲೋಕಿಗೆ ಬಹಳ ಆನಂದವಾಗುವುದು. ಸಹಜ. ಶ್ರೇಷ್ಠ ಚಿಕಿತ್ಸಕನಂತೆ ಧುರೀಣನ್ನು ನಿರ್ಭಯವಾಗಿ ಪರಿಶುದ್ಧ ಹೃದಯದಿಂದ ಜನತಾ ಸಮೂಹದಲ್ಲಿ ಅಂಧಪರಂಪರೆಯಿಂದ ಬಂದ ಅರ್ಥವಿಲ್ಲದ ಅನೇಕ ರೂಢಿಗಳನ್ನೂ, ಕೊಳಕು ಕಶ್ಮಲಗಳನ್ನೂ ಶಸ್ತ್ರಚಿಕಿತ್ಸಕನಂತೆ ತಿಕ್ಕಿ ತೊಳೆದು ದೂರ ಬಿಸಾಡಬೇಕಾಗುವುದು. ದೇಶ ಕಾಲ ಪರಿಸ್ಥಿತಿಯ ಹಿಂದು ಮುಂದಿನ ಬಹು ದೂರದೃಷ್ಟಿ, ಉನ್ನತ ಸಂಯಮ ಜೀವನದಿಂದ ಅತನಲ್ಲಿ ಬೆಳೆದು ಬರಬೇಕಾಗುವುದು. ಕಾರ್ಯಕ್ರಮ ನಿರ್ಧರಿತ ಮಾಡಿದ ನಂತರ ಅದರಲ್ಲಿ ದೃಢನಾಗಿರುವಿಕೆಯು ಅತ್ಯಾವಶ್ಯಕ. ಸಾವಿರಾರು ವಿಘ್ನಗಳು ಬಂದರೂ ಚಂಚಲನಾಗದೆ ತನ್ನ ನಿರ್ದಿಷ್ಟ ಮಾರ್ಗದಲ್ಲಿ ದೃಢನಾಗಿದ್ದು ಜನತಾ ಸಮೂಹದ ಮುಂದೆ ನುಗ್ಗುವಂತೆ ಉತ್ಸಾಹಿಸುತ್ತಿರುವವನೂ ಮಾರ್ಗದಲ್ಲಿ ಬರುವ ಸಂಕಷ್ಟಗಳಿಗೆ ಪ್ರತಿಕಾರ ಮಾಡುತ್ತಾ ಪ್ರಲೋಭಗಳಿಗೆ ನಾಲಿಗೆ ನೀಡದೆ ಉನ್ನತ ಧ್ಯೇಯಸಾಧನೆಗಾಗಿ ದಿನ ದಿನ ರಾತ್ರಿ ಹಗಲೂರಿ ಎನಿಸಿಕೊಂಡು ಅಧಿಕ ಧೈರ್ಯ ಸಾಹಸದಿಂದ ಮುನ್ನುಗ್ಗುವನೇ ನಿಜವಾದ ವೀರ ಸಾಹಸಿ ಧುರೀಣನೆನಿಸಿಕೊಳ್ಳುವನು. ಶ್ರೇಷ್ಠ ಕಾರ್ಯಗಳ ಸಿದ್ಧಿಗಾಗಿ ಅನೇಕ ಮಹನೀಯರ ಉತ್ತಮ ಸದುಪದೇಶಗಳು ದೊರೆಯುಬಹುದು. ಆದರೆ ಶ್ರೇಷ್ಠ ಕಾರ್ಯವು ಕೃತಿರೂಪದಲ್ಲಿ ಬರಲು ಧುರೀಣನೊಬ್ಬನೇ ಕಠೋರ ತಪಶ್ಚರ್ಯೆಯಲ್ಲಿ ನಿರತನಾದ ತಪಸ್ವಿಯಂತೆ ದಿನ ರಾತ್ರಿ ದೃಢತೆಯಿಂದ ಹೆಣಗಾಡಬೇಕಾಗುವುದು. ಸುತ್ತ ಮುತ್ತಲಿನ ನಾನಾ ಸಂಕಷ್ಟದ ಪರಿಸ್ಥಿತಿಯನ್ನು ಉಜ್ವಲ ಧೈರ್ಯಸಾಹಸದಿಂದ ಗೆದ್ದು ಬರುವ ಅಪೂರ್ವ ಎದೆಗಾರಿಕೆ ಅವನಲ್ಲಿ ದೃಢವಾಗಿರಬೇಕಾಗುವುದು. ಮಹೋನ್ನತ ವ್ಯಕ್ತಿತ್ವ ನಿರ್ಮಾಣಕ್ಕಾಗಿ ಅನೇಕ ಸಂಕಷ್ಟಗಳಿಗೆ ಅದ್ಭುತಧೈರ್ಯ ಸಾಹಸದಿಂದ ಎದುರಾಡುವ ಕಲ್ಲಿನ ಎದೆಗಾರಿಕೆ ಬೇಕಾಗುವುದು. ದೇಶ ಜನತಾ ಸಮೂಹದ ಅಭಿವೃದ್ಧಿಗಾಗಿ ಸ್ವಾರ್ಥತ್ಯಾಗಪೂರ್ವಕವಾಗಿ ಜೀವನ ಸರ್ವಸ್ವವನ್ನೂ ಬಲಿವೇದಿಕೆಯಲ್ಲಿ ಅರ್ಪಿಸುವಷ್ಟು ಧೃಢತೆ ಪರಿಶುದ್ಧ ಹೃದಯದವನಾಗಿರಬೇಕಾಗುವುದು.

ಇಂದು ಸುತ್ತಮುತ್ತಲೂ ಧುರೀಣರ ಸಂಖ್ಯೆ ವಿರಳವಾಗಿ ಬೇಯುತ್ತಿದೆ. ಕಾಲೇಜು ವಿದ್ಯಾರ್ಥಿಗಳಿಂದ ಹಿಡಿದು ಗ್ರಾಮದ ರೈತರ ವರೆಗೆ ಪ್ರತಿಯೊಬ್ಬನು ಧುರೀಣನಾಗಿ ನೇರೆಯಬಯಸುವವರಲ್ಲದೆ ಅನುಯಾಯಿಯಾಗಿ ಹಿಂದಿನಿಂದ ಕೆಲಸ ಮಾಡಲು ಯಾರೂ ಒಪ್ಪುವುದಿಲ್ಲ. ಮೊತ್ತಮೊದಲು ನಮ್ಮನ್ನು ನಾವೇ ಜೆನ್ನಾಗಿ ತಿದ್ದಿಕೊಂಡು ಆತ್ಮಹಿತ ಸಾಧಿಸಲು ಸಮರ್ಥರಾಗದೆ ಹೋದರೆ ನಮ್ಮಿಂದ ನಮಗೂ ಪ್ರಯೋಜನವಿಲ್ಲ. ಲೋಕಕ್ಕೂ ಯಾವ ಪ್ರಯೋಜನ ದೊರಕಲಾರದು. ರಾಷ್ಟ್ರದ ನವನಿರ್ಮಾಣದ ಈ ಯುಗದಲ್ಲಿ ಪ್ರತಿಯೊಬ್ಬ ವ್ಯಕ್ತಿಯು ಸ್ವತಂತ್ರವಾಗಿ ತನ್ನ ಕಾಲಮೇಲೆ ತಾನು ನಿಂತುಕೊಳ್ಳಲು ಪ್ರಯತ್ನಿಸಬೇಕು. ಬೇರೆಯವರನ್ನು ಹೊಂದಿ ಬಾಳುವ ಪರಾಧೀನ ಜೀವನದಿಂದ ನಮಗೆಂದಿಗೂ ಕ್ಷೇಮವಿರಲಾರದು. ದೇಶದ ಪ್ರತಿಯೊಬ್ಬ ವ್ಯಕ್ತಿಯೂ ತನ್ನನ್ನು ತಾನು ಜೆನ್ನಾಗಿ ಒಳಗೂ ಹೊರಗೂ ತಿದ್ದಿಕೊಳ್ಳಲು ಸಮರ್ಥನಾದರೆ ಭಾರತದ ಉನ್ನತಿ ಸ್ವಲ್ಪ ಕಾಲದಲ್ಲಿ ಅತ್ಯಾಶ್ಚರ್ಯಕರವಾಗಿ ಆಗುವುದರಲ್ಲೇನೂ ಸಂದೇಹವಿರಲಾರದು. ‘ನ ಭಾ.’

---

೪. ಹಿಂದುಗಳಲ್ಲಿ ಹರಿಜನರ ಮೇಲೆ ಪ್ರೀತಿ ವಿಶ್ವಾಸವನ್ನು ಉಂಟುಮಾಡುವಂತೆ ಪ್ರಚಾರಕಾರ್ಯಗಳನ್ನು ನಡೆಸುವುದು.

೫. ಹರಿಜನರ ಆರ್ಥಿಕ ಸುಧಾರಣೆಗಾಗಿ ಸಹಕಾರ ಸಂಘಗಳನ್ನು ಸ್ಥಾಪಿಸಿ, ಜಯಪ್ರದವಾಗಿ ನಡೆಸುವುದು.

ಈ ಮೇಲಿನ ಧ್ಯೇಯಗಳನ್ನು ಮುಂದಿಟ್ಟುಕೊಂಡು ಕವ್ಯ ಕೈಯಲ್ಲಾಗುವ ಸಹಾಯವನ್ನು ನೀಡಿ, ಕಾರ್ಯಕಾರೀ ಮಂಡಳಿಯಲ್ಲಿಯಾಗಲೀ ಬೇರೆ ರೀತಿಯಲ್ಲಾಗಲೀ ಕೆಲಸ ಮಾಡಲು ತಯಾರಿರುವವರು. ತಮ್ಮ ಇಷ್ಟವನ್ನು ಸೂಚಿಸಿ ಈ ಕೆಳಗಿನ ವಿಳಾಸಕ್ಕೆ ಕಾಗದವನ್ನೂ ಬರೆಯಬೇಕಾಗಿ ಕೇಳಿಕೊಳ್ಳುತ್ತೇನೆ.

ಹರಿಜನ ಬಂಧು
C/o ಕೊಡಗು ಮಡಿಕೇರಿ.

—೦೦೦—

ಮಳೆಗಾಲದಲ್ಲಿ ಕಟ್ಟಡಗಳ ಸೋರುವಿಕೆಯಿಂದ ತೊಂದರೆ ಪಡಬೇಡಿ.

ಕಟ್ಟಡದ ಛಾವಣಿಯು (Roof) ಸೋರುತ್ತಿದ್ದರೆ, ಸೋರುವಿಕೆಯನ್ನು ನಿಲ್ಲಿಸಲು, “Seep-o-Seal” ದ್ರಾವಕವೇ ಅತ್ಯಂತ ಫಲಕಾರಿಯುಳ್ಳದ್ದೂ ಮತ್ತು ತೀರ ಕಡಿಮೆ ಖರ್ಚುಳ್ಳದ್ದು–ತಕ್ಷಣವೇ ವಿವರಗಳಿಗೆ ಈ ಕೆಳಗೆ ಕಂಡ ವಿಳಾಸಕ್ಕೆ ಬರೆಯಿರಿ. ಈ ದ್ರಾವಕವನ್ನು ಮಾರಲು ಏಜಂಟರು ಸಹ ಬೇಕಾಗಿದೆ.

V. RAJAGOPALA IYENGAR,
Sri Raghava Vilas,
Eastern Extention,
Mandya, [Mysore State]

2–2

ನಿಮ್ಮ ಸ್ವಂತ ಲಾಭಕ್ಕಾಗಿ ವಿಮೆ ಮಾಡಿ-ಅಥವಾ
— ಪ್ರತಿನಿಧಿಯಾಗಿ —

ದಿ ಬಾಂಬೆ ಮ್ಯೂಚುಯಲ್ ಲೈಫ್ ಅಷ್ಯೂರೆನ್ಸ್ ಸೊಸೈಟಿ ಲಿಮಿಟೆಡ್.

ಭಾರತದಲ್ಲಿನ ಅತ್ಯಂತ ಹಳೆಯ ವಿಮಾ ಸಂಸ್ಥೆ.

12-7 [ಸ್ಥಾಪಿತ 1871]

ವಿವರಗಳಿಗೆ:–ದಿ ಬ್ರಾಂಚ್ ಸೆಕ್ರೆಟರಿ,
172-173, ನರಸಿಂಹರಾಜರೋಡು, ಬೆಂಗಳೂರು 2.

ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೊ.ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿತು)

ಅಧಿಕೃತ ಶೇರು ಭಂಡವಾಳ	ರೂ.	10,00,000.
ವಸೂಲಾದ ಶೇರು ಮೊಬಲಗು	ರೂ.	1,99,400.
ಕ್ಷೇಮನಿಧಿ	ರೂ.	59,000.
ಇತರ ನಿಧಿಗಳು	ರೂ.	36,000.

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ಕೈಕೊಳ್ಳಲಾಗುವುದ

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ, ಬೆಳ್ಳಿ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಜೆಕ್ ಯೂ ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಸ್ಟಿಟಿ ಮತ್ತು ವಾರ್ಡನ್ಸ್ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಕೆ. ಪಿ. ಅಪ್ಪಯ್ಯ, M. L. C.
ಸ್ಥಾ. ಕಾರ್ಯದರ್ಶಿ, ಪ್ರೆಸಿಡೆಂಟ್ ಮತ್ತು ಮ್ಯಾನೇಜ್.

ವಸ್ತು ಸಂಗ್ರಹದ ಭ್ರಾಂತಿ.

ಲೇ:—ಶ್ರೀ ಕೆ. ಬಿ ಐಯ್ಯಪ್ಪ, ಬಿ. ಎ.. ಬಿ. ಟಿ ನಾಪೋಕ್ಲು.

ಈ ಲೋಕದಲ್ಲಿ ಬಾಳುತ್ತಿರುವ ಹೆಚ್ಚಿನ ವ್ಯಕ್ತಿಗಳಿಗೆ ಯಾವುದಾದರೊಂದು ವಿಷಯದಲ್ಲಿ ವಿಶೇಷತರವಾದ ಮನೋಭ್ರಾಂತಿ ಇರುತ್ತದೆ. ಅದನ್ನು ತೃಪ್ತಿಕರವಾಗಿ ಈಡೇರಿಸಿಕೊಂಡು ಆನಂದಿಸಲು ಅವರು ತಮ್ಮ ತನುಮನಧನಗಳನ್ನು ವ್ಯಯಿಸಿಯುತ್ನಿಸುವರು. ಎಳೇ ಮಕ್ಕಳಿಂದ ಮೊದಲೆಗ್ಗಿಂಡು ವೃದ್ಧರ ವರೆಗೂ ಈ ವಿಶೇಷತರವಾದ ಅಭಿರುಚಿ ಇದ್ದೇ ಇರುವುದು. ಒಬ್ಬನು ತನ್ನ ಜೀವಾವಧಿಯ ವಿವಿಧ ಅವಸ್ಥೆಗಳಲ್ಲಿ ಕಾಲಕ್ಕನುಗುಣವಾಗಿ ಈ ಭ್ರಾಂತ ವಿಷಯ ಲಂಪಟತನವನ್ನು ಬದಲಾಯಿಸುತ್ತಿರಬಹುದು. ಅದರೆ ಆ ಭಾವನೆಯು ಮಾತ್ರ ಮನಸ್ಸಿನ ಅಂತರಾಳದಲ್ಲಿ ಭದ್ರವಾಗಿ ನೆಲಸಿರುವುದು. ಅನೇಕಾನೇಕ ವಿಚಿತ್ರ ಮತ್ತು ವಿಶೇಷ ಆಸಕ್ತಿಗಳಲ್ಲಿ 'ವಸ್ತು ಸಂಗ್ರಹ' ಭಾವವು ಬಹು ಗಮನಾರ್ಹವಾದದ್ದು; ಮಾತ್ರವಲ್ಲ ಆಯಾ ವ್ಯಕ್ತಿಗಳ ಪ್ರಧಾನ ನಡತೆಯನ್ನು ಎತ್ತಿ ತೋರಿಸುವಂತಾಹದ್ದು.

ಒಬ್ಬೊಬ್ಬರು ಒಂದೊಂದು ಮಾದರಿಯ ವಸ್ತುಗಳನ್ನು ಸಂಗ್ರಹಿಸುವರು. ವಿದ್ಯಾರ್ಜನೆ ಮಾಡುವವರಲ್ಲಿ ಈ ಸಂಗ್ರಾಹಕ ಗುಣವು ಒಂದೊಂದು ರೀತಿಯಲ್ಲಿ ವಿಷದವಾಗುವುದು. ನಂತರದ ಜೀವನ ಸಂಗ್ರಾಮದಲ್ಲಿ ಹಲವರು ಈ ವೃತ್ತಿಯನ್ನು ಮುಂದರಿಸುವರು; ಹಲವರು ತ್ಯಜಿಸುವರು; ಹಲವರು ಸಮಯೋಚಿತರ್ಹ ಬಂದಾಗ ಮಾತ್ರ ಸಂಗ್ರಹಿಸುವರು. ಕೆಲವರನ್ನು ಮಾತ್ರ ಈ ಪ್ರಚಂಡ ಭ್ರಮೆಯು ಕಾಡುತ್ತಿರುತ್ತದೆ. ಅನುದಿನವೂ ತಾವು ಸಂಗ್ರಹ ಮಾಡಿದ ವಸ್ತುಗಳನ್ನು ಮುಂದಿಟ್ಟುಕೊಟ್ಟು, ಬಂದವರಿಗೆಲ್ಲಾ ಅನುಭವಿಸಿದ ಶ್ರಮವನ್ನು ಆತೀ ಹೆಮ್ಮೆಯಿಂದ ವಿವರಿಸುತ್ತ, ಸಂತೋಷ ಪಡುವರು. ಹೇಗೂ ಇರಲಿ, ಈ ಅಭ್ಯಾಸ ಅಷ್ಟು ಕೆಟ್ಟದೇನೂ ಅಲ್ಲ.

ನಾನಾ ರಾಷ್ಟ್ರಗಳ ಸ್ಟಾಂಪುಗಳನ್ನು ಸಂಗ್ರಹಿಸುವರು ಹಲವರು. ಅಂತರಾಷ್ಟ್ರೀಯ ಸ್ಟಾಂಪು ಸಂಗ್ರಾಹಕಸಂಸ್ಥೆಯೊಂದು ಈ ಉತ್ಸಾಹಗಳಿಗೆ ಸ್ಫೂರ್ತಿ ಕೊಡಲಿಕ್ಕಾಗಿಯೇ ಸ್ಥಾಪನೆಯಾಗಿದೆ ಅತೀ ವಯುಸ್ಸಾದ ಸ್ಟಾಂಪುಗಳನ್ನು ಹೆಚ್ಚು ಬೆಲೆಕೊಟ್ಟು ಪಡೆಯುತ್ತಾರೆ. ಸಂಸ್ಥೆಯ ಸದಸ್ಯರು ಅತ್ತಿತ್ತ ಬದಲಾಯಿಸಿ ಕೊಳ್ಳುತ್ತಾರೆ. ಅಮೇರಿಕದ ಸ್ತ್ರೀಯೊಬ್ಬಳು ೧,೪೫,೦೦೦ ವಿವಿಧ ಸ್ಟಾಂಪುಗಳನ್ನು ಜೊತೆಸೇರಿಸಿ, ಹರ್ಷೋದ್ಗಾರವೆಸಗುವಂತೆ ಅದ್ಭುತ ಕೆಲಸ ಮಾಡಿದೆನೆಂದು ಹೆಮ್ಮೆಪಡುತ್ತಾಳೆ. ಕೆಲವೇನೂ ಮಹತ್ತಾದ್ದಲ್ಲ; ಆದರೆ ಹೆಮ್ಮೆ ಪಡುವ ಅವಶ್ಯಕತೆ ಇದೆಯೋ? ಈ ಕಾಲದ ವಿದ್ಯಾವಂತ ಸ್ತ್ರೀಯರೆಲ್ಲ ಹೆಚ್ಚು ಕಡಿಮೆ ಹಾಗೆಯೆ! ಎರಡು ಲಕ್ಷ ಡಾಲರುಗಳಿಗೆ ಈ ಸಂಗ್ರಹವನ್ನು ಆತೀ ಕೊಡಲೊಪ್ಪುವುದಿಲ್ಲ. ರಷ್ಯ, ಜರ್ಮನಿ ಮತ್ತು ಬ್ರಿಟನ್ ದೇಶಗಳು ಮತ್ತು ನಮ್ಮ ಭಾರತ ಖಂಡವು ಸಹ ಮನೋಹರವಾದ ಸ್ಟಾಂಪುಗಳಿಗೆ ಹೆಸರುವಾಸಿಯಾಗಿವೆ. ಗ್ರೀಳಲರಲ್ಲಿ ಬೆಸೆಲ್ ನಗರದಲ್ಲಿ, ಗ್ರೀಂರಲ್ಲಿ ಲಿಪ್‌ಜಿಗ್ ಮತ್ತು ಪ್ರೇಗ್ ನಗರದಲ್ಲಿ ನಡೆದ ಸ್ಟಾಂಪುಗಳ ಪ್ರದರ್ಶನದಲ್ಲಿ ರಷ್ಯಕ್ಕೆ ಸುವರ್ಣ ಪದಕಗಳು ದೊರಕಿವೆ. ವಿದ್ಯಾರ್ಥಿಗಳು ಸ್ಟಾಂಪು ಸಂಗ್ರಹ ಮಾಡುವುದು ಒಳ್ಳೆಯದು. ಪರರಾಷ್ಟ್ರಗಳಲ್ಲಿನ ನವನವ ಸುಂದರ ದೃಶ್ಯಗಳು, ಕಟ್ಟಡಗಳು, ಕಾರ್ಖಾನೆಗಳು, ಯಂತ್ರಗಳು, ಮಹಾನ್ ವ್ಯಕ್ತಿಗಳು ಮತ್ತು ಅನೇಕಾನೇಕ ಭೌಗೋಳಿಕ ಮತ್ತು ಚಾರಿತ್ರಿಕ ವಿಷಯಗಳು ಮನವರಿಕೆಯಾಗುವುದು.

ಕೆಲವರು ಪಕ್ಷಿಗಳ ಗರಿಗಳನ್ನು ಸಂಗ್ರಹಿಸುವರು. ಬಗೆಬಗೆಯ ಬಣ್ಣಗಳಿಂದ ಶೋಭಾಯಮಾನವಾಗಿರುವ ಈ ಜೋಡಣೆಯು ನೋಟಕರ ಮನಸ್ಸನ್ನು ಸಂತಸಗೊಳಿಸುವುದರಲ್ಲಿ ಸಂದೇಹವಿಲ್ಲ ಪಕ್ಷಿಗಳ ಕೊಕ್ಕುಗಳನ್ನು ಜೊತೆ ಸೇರಿಸುವವರು ಇದ್ದಾರೆ. ಪಕ್ಷಿಗಳ ಮೊಟ್ಟೆಗಳನ್ನು ಸಂಗ್ರಹಿಸುವುದು ಹಲವರ ಅಭಿರುಚಿ. ಕ್ರಮಪ್ರಕಾರವಾಗಿ ಕನ್ನಡಿ ಪೆಟ್ಟಿಗೆಯೊಳಗಿಟ್ಟು, ಹೆಸರಿಸಿ ಬಂದವರಿಗೆಲ್ಲಾ ಅವರ ಯೋಗಕ್ಷೇಮವನ್ನು ಕೇಳುವುದಕ್ಕೆ ಮಾತ್ರ, ತಮ್ಮ ಅತ್ಯದ್ಭುತ ಕೆಲಸದ ಫಲಿತಾಂಶವನ್ನು ತೋರಿಸಿ ಹೆಮ್ಮೆ ಪಡುವ ಭ್ರಾಂತಿ ಹಲವರಿಗಿದೆ. ಒಂದು ಮೊಟ್ಟೆಯು ಆಕಸ್ಮಿತವಾಗಿ, ಪ್ರೇಕ್ಷಕರಿಂದ ಒಡೆದು ಹೋದರೆ, ಬಂದವರು ಎಂತಹ ಆಪ್ತನೇ ಆಗಿರಲಿ, ಅತನ ಕತ್ತನ್ನ ಅರೆಕ್ಷಣ ಹಿಸುಕದೆ ಬಿಡಲೊಲ್ಲರು.

ವಿವಿಧ ಪುಷ್ಪಗಳನ್ನು ದಳಗಳೋಪಾದಿಯಲ್ಲಿ ಹಲವರು ಶೇಕರಿಸುವರು ಇದಕ್ಕಾಗಿ, ಪಾಶ್ಚಾತ್ಯ ಪೌರಾಷ್ಟ್ರಗಳ ಉತ್ಸಾಹಿಗಳು ಆತ್ಯತ್ತ ಪ್ರಯಾಣ ಬೆಳೆಸುವರು. ಇದೆಂತಹ ಭ್ರಮೆ! ಸಸ್ಯಶಾಸ್ತ್ರಜ್ಞರನ್ನು ಕೆಲವರು ಬೆನ್ನಿಬಿಡದ ಭೇತಾಳನಂತೆ ಅಂಟುವರು ಏಕೆ ಗೊತ್ತೆ? ನವನವೀನ ಹೂಗಳನ್ನ ಬೆಳೆಸುವುದಕ್ಕೆ ಪ್ರಯೋಗ ನಡೆಸುವುದರಿಂದ.

ಉಣ್ಣೆ ಬಟ್ಟೆಯ ಚೂರುಗಳನ್ನು ಸಂಗ್ರಹಿಸುವುದು ಮತ್ತೊಂದು ರೀತಿಯ ವಿಚಿತ್ರ ಭ್ರಾಂತಿ. ಕಾರ್ಖಾನೆಗಳಿಂದ ತುಂಬಾ ಒಟ್ಟಿ ಬೇಕೆಂದು ಹಲವರು ಕೆಟಲಾಗನ್ನು ತರಿಸುವರು. ಬಟ್ಟೆಯು ಚೂರುಗಳು ಆಗನಿಸಿದನಂತರ, ಕಂಪೆನಿಗೆ "ಜೋಟುಕೊಡಲಕ್ಕಂ ಸರ್ವಜ್ಞ" ಎನ್ನುವರು. ರೇಶ್ಮೆ ಚೂರುಗಳನ್ನ ಸ್ತ್ರೀಯರಲ್ಲಿ ಹಲವರು ಜೊತೆ ಸೇರಿಸುವರು.

ಏನಿನೂ ನಟನಟಿಯರ ಭಾವಚಿತ್ರಗಳನ್ನು ಸಂಗ್ರಹಿಸುವುದು ವಿದ್ಯಾರ್ಥಿ ವೃಂದದಲ್ಲಿ ಸಹಜಲಸಾಧ್ಯವಾದ ಆಟುವ್ಯಾಧಿಯಾಗಿದೆ. ರಾಜು ಹಾಕಿದ ಚಿತ್ರಗಳು ಬೇಕೆಂದು ಪತ್ರವ್ಯವಹಾರ ಮಾಡಿ, ಜಿಗುಪ್ಸೆ ಹೊಂದುವುದೇ ಹೆಚ್ಚು. ಇವರ ವ್ಯಸನ ಹೇಳಿ ತೀರದು. ಲಕ್ನೋದ ಕಾಲೇಜು ವಿದ್ಯಾರ್ಥಿಯೊಬ್ಬನು ತನ್ನ ಸ್ವಪ್ನದ ರಾಣಿ ಸುರೈಯಳಿಂದ ರಾಜು ಹಾಕಿದ ಚಿತ್ರ ಬರಲಿಲ್ಲವೆಂದು ಆತ್ಮಹತ್ಯ ಮಾಡಲು ಯತ್ನಿಸಿದನಂತೆ! ನಟರನ್ನುತಮ್ಮ ನಾಯಕ ನಾಯಕಿಯರೆಂದು ಪೂಜಿಸುವವರೂ ಇದ್ದಾರೆ. ಈ ರೀತಿಯ ಮನೋಭ್ರಾಂತಿ ಯಾರಿಗೂ ಉತ್ತಮವಲ್ಲ ಬದಲು ಹಾನಿಕರವಾದದ್ದೇ ಸರಿ. ಚಿತ್ರಿಸಿ ನಿಮಗೂ ಹುಚ್ಚು ಹಿಡಿದುಬಿಟ್ಟರೆ ಅದನ್ನು ನಿಗ್ರಹಿಸುವುದಕ್ಕೆ ಬ್ರಹ್ಮನೆ ಸಾಕ್ಷಾತ್ಕಾರವಾಗಬೇಕು. ಇದರಲ್ಲಿ ಮತ್ತೊಂದು ವಿಷಯ 'ಹಾಲಿವುಡ್' ನಗರದ ಹೆಸರನ್ನು ಕೇಳದವರು ಅಲ್ಪ. ಕೆಲವು ವರ್ಷಗಳ ಹಿಂದೆ ನೆಶಲ್ಸ್ ಚಾಕಲೇಟು ಪೇಕೇಟುಗಳಲ್ಲಿ ಅಲ್ಲಿನ ನಟನಟಿಯರ ಭಾವಚಿತ್ರಗಳು ಬರುತ್ತಿದ್ದುವು. ಈ ಚಿತ್ರಗಳನ್ನು ಆಲ್ಬಂಗಳಲ್ಲಿ ಅಂಟಿಸಲಿಕ್ಕಾಗಿ ಅದೆಷ್ಟೋ ಚಾಕಲೇಟುಗಳು ನಾಶವಾಗುತ್ತಿದ್ದವು. ಅನೇಕ ವೇಳೆಯಲ್ಲಿ ಒಂದೇ ರೀತಿಯ ನಟ್ಸಿಗಳು ದೊರೆಯುತ್ತಿದ್ದರಿಂದ ಚಾಕಲೇಟು ಕೊಂಡುಕೊಂಡಷ್ಟು ಸಾಲದು. ಖರ್ಚುಮಾಡಿದಷ್ಟು ಸಾಲದು. ಮಕ್ಕಳು ತಮ್ಮ ತಂದೆತಾಯಿಗಳಿಗೆ ಸುಳ್ಳು ನೆಪಹೇಳಿ ಲಂಕರ್ ಫೀಸು ಸಹ ಇದೆಯೆಂದು ಹಣ ತರಿಸಿದಷ್ಟು ಸಾಲದು. ಕಾಲ ಉರುಳುತ್ತಾ, ಚಾಕಲೇಟಿನ ಸವಿಯು ನಾಲಗೆಗೆ ಇಳಿದು ಇತ್ತಲಾಗಿ ಹಣವೂ ಇಲ್ಲ; ಅತ್ತಲಾಗಿ 'ಆಲ್ಬಂ' ಕಪಾಟಿನ ಬುಟ್ಟಿಯಲ್ಲಿ ಸ್ಥಾನ ಪಡೆಯಿತು. ಈ ರೀತಿಯ ಆಸಕ್ತಿ ಯಾರಿಗೂ ಇರತಕ್ಕದ್ದಲ್ಲ.

ರಾಷ್ಟ್ರವೀರರ, ಕವಿಗಳ ಅಥವಾ ಆತ್ಯುತ್ತಮ ಗಂಥಕರ್ತರ ಚಿತ್ರಗಳನ್ನು ಕೆಲವರು ಸಂಗ್ರಹಿಸುವರು. ಕೆಲವರು ಇಡೀ ಜೀವನ ಚರಿತ್ರೆಗಳ ಚಿತ್ರಗಳನ್ನು ಸಂಗ್ರಹಿಸುವರು. ಈ ಅಭ್ಯಾಸವು ಈಗಿನ ಪೌರನೀತಿ ಶಿಕ್ಷಣದ ಒಂದು ಅಂಗವಾಗಿದೆ. ಅತೀ ಉತ್ತಮ ಅಭ್ಯಾಸವೇ ಸರಿ ಇದರಿಂದ 'ಸುಬಾಸ್‌ಚಂದ್ರ ಬೋಸರ ಚಿತ್ರವನ್ನು ನೋಡಿ ನೇಕರ್ರೂ' ಎಂದು ಹೇಳುವವರಿಗಾದರೂ ಪ್ರಯೋಜನವಾದೀತು. ಸ್ವಂತ ಕೆಮೆರಾ ಇಟ್ಟುಕೊಂಡು, ಫೋಟೊ ತೆಗೆದು ನಟ್ಸಿಗಳನ್ನು ಹಲವರು ಆಲ್ಬಂಗಳಲ್ಲಿ ಸಂಗ್ರಹಿಸುತ್ತಾರೆ. ಇದು ಹಣವಂತರಿಗೆ ಸಾಧ್ಯವಿದೆ. ಬಡ ವಿದ್ಯಾರ್ಥಿಗಳಿಗೆ ಇದು ಅಸಾಧ್ಯ. ಶ್ರೀಮಂತ ಕಾಲೇಜು ವಿದ್ಯಾರ್ಥಿಯೊಬ್ಬನಿಗೆ ಒಂದು 'ಕೆಮೆರಾ' ಇದ್ದರೆ ತನಗೂ ಒಂದು ಬೇಕೆಂದು ಗರೀಬ ವಿದ್ಯಾರ್ಥಿಯು ಹಂಬಲಿಸಿದರೆ ಅದರ ಪರಿಣಾಮ ಆತನಿಗೇ ಗೊತ್ತು. ಆನೆ ನೂಡುವ ಕೆಲಸವನ್ನು ಆಡು ಮಾಡಿದರೆ ಹೇಗಾದೀತು! ನೀವೇ ಭಾವಿಸಿರಿ.

ಈ ರೀತಿ ಈ ವಿಶೇಷಕರವಾದ ಮನೋ ಭಾವನೆಯು ಎಷ್ಟೋ ಜನರನ್ನು ಕೇವಲ ಭ್ರಾಂತರನ್ನಾಗಿ ಮಾಡಿದೆ. ಆ ಮೇರಿಕದ ಭ್ರಾಂತನೊಬ್ಬನು ಲೋಕದ ನಾಲ್ಕು ಮೂಲೆಗಳಿಂದ ನೀರನ್ನು ತಂದು ಬಾಟ್ಲಿಗಳಲ್ಲಿ ತುಂಬಿಸಿ ಮಹತ್ತಾದ ಸಂಗ್ರವೆಂದು ಹೆಮ್ಮೆ ಪಡುತ್ತಿದ್ದಾನೆ. ಸುಂದರ ದೃಶ್ಯಗಳಿಗೆ ಖ್ಯಾತಿ ಪಡೆದ ದೇಶಗಳಿಂದ ಬಗೆಬಗೆಯ ಕೆಲ್ಲುಗಳನ್ನು ತರಲು ಜನರು ರಾಷ್ಟ್ರಗಳನ್ನು ಸಂದರ್ಶಿಸುವರು. ಐಯರ್‌ಲೇಂಡ್, ಸ್ವಿಟ್ಜರ್‌ಲೇಂಡ್, ಪ್ಲೋರಿಡಾ ಮತ್ತು ಕಾಶ್ಮೀರ್ ದೇಶಗಳು ಈ ರೀತಿಯ ಸಂಗ್ರಹಗಾರರನ್ನು ಅಧಿಕವಾಗಿ ಆಕರ್ಷಿಸಿವೆ.

ತಮ್ಮ ಇಷ್ಟಮಿತ್ರರ, ರಾಷ್ಟ್ರಪಟುಗಳ ಹಾಗೂ ಅಗ್ರಗಣ್ಯ ವೇಧಾವಿಗಳ ರುಜುಗಳನ್ನು ಸಂಗ್ರಹಿಸುವುದು ಹಲವರ ಆಶೆಯಾಗಿದೆ ದಕ್ಷಿಣ ಆಫ್ರಿಕದ ನಿವಾಸಿಯೊಬ್ಬನು ಈ ವಿಷಯಕ್ಕೆ ಸಾಧಾರಣ ಜಂಟಿಮುಂದಿ 'ವೀರಚಕ್ರ' ಬಿರುದು ಪಡೆದ ಸೈನಿಕರ ರುಜುಗಳ ಸಂಗ್ರಹವೊಂದನ್ನು ಮಾಡಿರುತ್ತಾನೆ. ಈತನ ಮನೋಭಾವವನ್ನು ಪ್ರೇಕ್ಷಿಸಿನೀವು ಹುಚ್ಚನೆಂದು ಕರೆಯಬಹುದು. ಬರೀ ವೀರಚಕ್ರ ಪಡೆದವರ ರುಜುಗಳನ್ನು ಮಾತ್ರ ಏಕೆ ಸಂಗ್ರಹಿಸುತ್ತಾನೆ? ಎಂದು ನೀವು ಚಕಿತರಾಗಬಹುದು. ಹೇಗಾದರೂ ಸರಿಯೆ, ಆದೊಂದು ರೀತಿಯ ಆಸಕ್ತಿಯೇ ಸರಿ. ಮಾನವ ವ್ಯಕ್ತಿಗಳ ಗುಣ ವೈವಿಧ್ಯತೆಯನ್ನು ಇದರಿಂದ ಅರಿಯಬಹುದು.

ಆಂಗ್ಲಮಹನೀಯನೊಬ್ಬನು ಸಕಲ ರೀತಿಯ ಜೇಡರ ಬಲೆಗಳನ್ನು ಸಂಗ್ರಹ ಮಾಡಿದ್ದಾನೆ. ಈತನ ಅಭಿಲಾಷೆಗೆ ಏನನ್ನುವೀರಿ! ಮತ್ತೊಬ್ಬನು ಬಾಲ್ಯದಿಂದಲೇ ಸೈನಿಕರ ಗುಂಡಿಗಳನ್ನು ಸಂಗ್ರಹಿಸುತ್ತಾ, ಕಟ್ಟಕಡೆಗೆ, ಅಮೇರಿಕದ ಶ್ರೀಮಂತನೊಬ್ಬನಿಗೆ ೩೦,೦೦೦ ಪೌಂಡುಗಳಿಗೆ ಮಾರಿದನಂತೆ. ಈತನ ಶ್ರಮದ ಫಲಿತಾಂಶವನ್ನು ನೋಡಿ! ನ್ಯಾಯಾರ್ಕಿನ ಕ್ಷೌರಿಕನೊಬ್ಬನು, ಪ್ರಾಚೀನ ಕಾಲದಿಂದ ಹಿಡಿದು ಈಗಿನವರೆಗೆ ಇರುವ ಎಲ್ಲಾ ರೀತಿಯ ಕ್ಷೌರಸಾಮಾನುಗಳನ್ನು ಸಂಗ್ರಹಿಸಿದ್ದಾನೆ. ನಾನಾ ಬಗೆಯ ಕ್ಷೌರ ಕತ್ತಿಗಳು, ಬಟ್ಟಲುಗಳು, ಕಚೇರಿಗಳು, ಮತ್ತು ಕ್ಷೌರನೀತಿಯ ಹಸ್ತಗ್ರಂಥಗಳು. ಬಗೆಬಗೆಯ ಸಾಬೂನು ಪೆಟ್ಟಿಗೆಗಳು ಕೂದಲನ್ನು ಅಲಂಕರಿಸುವ ಪಿನ್ನುಗಳು ಪ್ರಾಮುಖ್ಯದ ವಸ್ತುಗಳಾಗಿವೆ.

ಜರ್ಮನಿಯ ಮಂತ ವೈದ್ಯನೊಬ್ಬನು ೧೫೦ ವರ್ಷಗಳನೇ ಶತಮಾನದಿಂದೀಚೆಗೆ ತಯಾರಾದಸಕಲ ಹಲ್ಲು ಕೀಳುವ ಉರಕರಣಗಳನ್ನು ಜೊತೆ ಸೇರಿಸಿದ್ದಾನೆ. ಇಂಗ್ಲೆಂಡಿನ ವ್ಯಕ್ತಿಯೊಬ್ಬನು ಸಾಧಾರಣ ೬೦,೦೦೦ ಬೇರೆ ಬೇರೆ ಕ್ರಿಸ್‌ಮಸ್ ಕಾರ್ಡುಗಳನ್ನು ಸಂಗ್ರಹಿಸಿರುತ್ತಾರೆ. ಕಾರ್ಡುಗಳು ಹೇಗೆ ಸಂಭವಿಸಿದೆಯೆಂದು ಇದರಿಂದಲೇ ತಿಳಿಯಬಹುದು. ಮತ್ತೊಬ್ಬನು ನಾನಾ ರೀತಿಯ ಗಾಜಿನ ಪಾತ್ರೆಗಳನ್ನು ಬಾಟ್ಲಿಗಳನ್ನು ಸಂಗ್ರಹಿಸಿದ್ದಾನೆ. ರತನ ಮನೆಯಲ್ಲಿ ಎಲ್ಲಿ ನೋಡಿದರೂ ಬಾಟ್ಲಿಗಳೆ!

ಪದೇ ಪದೆ ಶಸ್ತ್ರಚಿಕಿತ್ಸೆಗೆ ಒಳಗಾಗುತ್ತಿದ್ದ ರೋಗಿಯೊಬ್ಬನು, ತನ್ನ ವೂಂಸ ಖಂಡಗಳ ಚೂರುಗಳನ್ನು ಹೆಸರಿಸಿ ಬಾಟ್ಲಿಗಳಲ್ಲಿ ಸಂಗ್ರಹಿಸಿರುತ್ತಾನೆ. ಇದೆಂತಹ ಹುಚ್ಚು ಏರ್ಪಾಡು!

ಕಾಲಿ ಬೇಕೆಪೆಟ್ಟಿಗೆಗಳನ್ನು ಜಮಾಯಿಸಿ, ಅದರಿಂದ ಪುಟ್ಟಿ ಪುಟ್ಟ ಮಾದರಿ ವಸ್ತುಗಳನ್ನ ರಚಿಸುವುದು ಇನ್ನೊಂದು ರೀತಿಯ ಆಸಕ್ತಿಯಾಗಿದೆ. ಸಣ್ಣ ಸಣ್ಣ

ಗೃಹಗಳನ್ನೂ ಹಡಗುಗಳನ್ನೂ ಯಂತ್ರಗಳನ್ನೂ ತಯಾರಿಸುತ್ತಾರೆ. ಅರಸರಿಗೂ ಸಹ ಈ ರೀತಿಯ ಅಭ್ಯಾಸವಿದೆಯೆಂದರೆ ನಮಗೆ ಆಶ್ಚರ್ಯವಾಗಬಹುದು. 'ಚೂಲ ಎಂಬ ಸಯಾಂರಾಷ್ಟ್ರದ ಅರಸನೊಬ್ಬನು, ಲಂಡನ್‌ನಲ್ಲಿ ಹೋಗುತ್ತಿದ್ದಹಾಗೆ ದಾರಿಯಲ್ಲಬಿದ್ದ ಖಾಲಿ ಬೆಂಕಿಪೆಟ್ಟಿಗೆಯೊಂದನ್ನುಹೆಕ್ಕಿ ತೆಗೆದದ್ದನ್ನು ನೋಡಿ, ಅಲ್ಲಿನ ದಾರಿಗರು ಆಶ್ಚರ್ಯಪಟ್ಟರಂತೆ. ಅಮೇರಿಕದ ವೈದ್ಯನೊಬ್ಬನು ೪೫,೦೦೦ ಬಗೆಬಗೆಯ ಖಾಲಿ ಬೆಂಕಿಪೆಟ್ಟಿಗೆಗಳನ್ನೂ ಓಹಿಯೇ ನಗರದ ಯುವತಿಯೊಬ್ಬಳು ೮೨,೦೦೦ ಪೆಟ್ಟಿಗೆಗಳನ್ನೂ ಶೇಕರಿಸಿದ್ದಾರೆ. ನಾನಾ ರೀತಿಯ ಮುದ್ರಾಸ್ಟಾಂಪುಗಳನ್ನು ರಾಷ್ಟ್ರಗಳು ಹೇಗೆ ಪ್ರಚುರಪಡಿಸುತ್ತವೋ, ತದ್ರೀತಿಯಲ್ಲಿ ಬೆಂಕಿಪೆಟ್ಟಿಗೆಗಳನ್ನು ಸಹ ಹೊಸ ಮಾದರಿಯ ಲೇಬಲುಗಳನ್ನು ಅಂಟಿಸಿ ಪ್ರಚಾರ ಮಾಡುತ್ತಾರೆ. ಜಪಾನ್, ಫಿನ್‌ಲೇಂಡ್, ಸ್ವಾಟ್ಸ್ವಿಸ್ಟ್ಸೀಡನ್ ಇದಕ್ಕೆ ಹೆಸರುವಾಸಿಯಾಗಿವೆ.

ಡಬ್ಲಿನ್‌ನಗರದ ಜನರು ಬೆಂಕಿಪೆಟ್ಟಿಗೆಗಳಿಂದ ಸಣ್ಣಸಣ್ಣ ವಯರ್‌ಲೆಸ್ ಯಂತ್ರಗಳನ್ನು ಮಾಡುತ್ತಾರೆ. ಒಬ್ಬ ಆಂಗ್ಲೇಯನು ನಾಲ್ಕು ಕೋಣೆಗಳಿರುವ ಒಂದು ಸುಂದರ ಮನೆಯನ್ನು ನಿರ್ಮಿಸಿ, ಅದಕ್ಕೆ ಸರಿಯಾದ ಎಲ್ಲಾ ಮನೆ ಸಾಮಾನುಗಳನ್ನು ಆದರೊಳಗಿಟ್ಟು ನೂರು ಪೌಂಡುಗಳಿಗೆ ಮಾರಿದನಂತೆ!

ಈ ರೀತಿ 'ಸಂಗ್ರಹ ಅಸಕ್ತಿಯೇ' ಒಬ್ಬೊಬ್ಬರಲ್ಲಿ ಒಂದೊಂದು ವಿಭಾಗವಾಗಿರುವುದು. ಇವರನ್ನು ಬರೇ ಹುಚ್ಚರೆಂದು ನೀವು ಕರೆಯಬಹುದು; ಅಥವಾ ಬುದ್ಧಿವಂತರೆಂದು ಕರೆಯಬಹುದು. ಈ ದ್ವಂದ್ವ ಅಭಿಪ್ರಾಯಗಳು ಸರಿಯಾಗಿರಲಿಕ್ಕೂ ಸಾಕು, ಯಾ ತಪ್ಪಾಗಿರಲಿಕ್ಕೂ ಸಾಕು. ಆದರೆ ಕಾಲಕ್ಕೆ ಸರಿಯಾಗಿ, ಕ್ರಮ ಪ್ರಕಾರವಾಗಿ ತಮ್ಮಿಷ್ಟದ ವಸ್ತುಗಳನ್ನು ಮನಸಿಟ್ಟು ಸಂಗ್ರಹಿಸುವ ಅಭ್ಯಾಸವನ್ನು ಇಟ್ಟುಕೊಂಡರೆ, ಅದರಿಂದ ಚಾರಿತ್ರಿಕ ಹಾಗೂ ಪ್ರಾಪಂಚಿಕ ಭೂಗೋಳಕ ಜ್ಞಾನವು ಮನವರಿಕೆಯಾಗುವುದು. ಅಧುನಿಕ ಪ್ರಪಂಚದ ಸರ್ವಕೋಮುಖವಾದ ಮುನ್ನಡೆಯು ಸ್ವಲ್ಪ ಮಟ್ಟಿಗಾದರೂ ಹೊಳೆಯುವುದು.

ಆಡಳಿತ ಯಂತ್ರ ಕುಂಠಿತವಾಗಿದೆ.

ಯೋಜನಾ ಆಯೋಗಕ್ಕೆ, ಕೇಂದ್ರ ಮತ್ತು ಪ್ರಾಂತೀಯ ಸರಕಾರಗಳ ಆಡಳಿತೆಯ ಯಂತ್ರದ ಸುಧಾರಣೆಯ ಹಾಗೂ ಪುನಃ ಸಂಘಟನೆಯನ್ನು ಮಾಡುವ ಕುರಿತು ವಿಚಾರ ಮಾಡಿ ವರದಿ ಒಪ್ಪಿಸಲು ನಿಯಮಿಸಲ್ಪಟ್ಟ 'ಗೋರವಾಲ ಸಮಿತಿ'ಯ ಪ್ರಮುಖರಾದ ಶ್ರೀ. ಎ. ಡಿ. ಗೋರವಾಲಾ ಅವರು ಜುಲೈ ೨೮ಕ್ಕೆ ತಮ್ಮ ವರದಿಯನ್ನು ಯೋಜನಾ ಆಯೋಗಕ್ಕೆ ಒಪ್ಪಿಸಿದ್ದು ಅವರ ಮುಖ್ಯಾಂಶಗಳು ಕೆಳಗಿನಂತಿವೆ:–

ರಾಜ್ಯವೀಗ "ಸುರಕ್ಷಿತತೆ"ಯ (Secular) ಪದ್ಧತಿಯಿಂದ "ಯೋಗ್ಯಕ್ಷೇಮ"ದ (Welfare) ಪದ್ಧತಿಯತ್ತ ಸಾಗುವ ಸಂಗ್ರಮಣ ಕಾಲದಲ್ಲಿದೆ. ಹೀಗೆಂದರೆ ಒಂದನ್ನು ಬಿಟ್ಟು ಇನ್ನೊಂದಕ್ಕೆ ಹೊರಟಂತಲ್ಲ. ಮೊದಲಿನದರ ತದ್ದಿ ಬೆಳೆಸಿದ ಸುಧಾರಿತ ಆವೃತ್ತಿಯೇ–ಮೊದಲಿನದರ ಪರಿಪೂರ್ಣ ಬೆಳೆವಣಿಗೆಯ ಸ್ವರೂಪವೇ–ಎರಡನೆಯದಾಗಿರುತ್ತದೆ. ಹೀಗಾಗಲು ಸರಿಯಾದ ಜನರು, ಸರಿಯಾದ ಶಿಕ್ಷಣ, ಸರಿಯಾದ ವಿನಿಯೋಗಗಳು ನಡೆಯಬೇಕಾಗುವುವು. ಹೀಗಾದರೇನೇ ಆಡಳಿತ ಯಂತ್ರವು ಭದ್ರವಾಗಿಯೂ ಸುಸೂತ್ರವಾಗಿಯೂ, ಸಮರ್ಥವಾಗಿಯೂ ಸಾಗುವುದು.

ಸದ್ಯದ ಆಡಳಿತ ಯಂತ್ರವು ರೀತಿಯಲ್ಲಿ ಈಗ ಸಮೂಧಾನಕಾರಕವೆನಿಸುವಂತೆ ನಡೆಯುತ್ತಿರುವದಿಲ್ಲವೆಂದು ನಿರೀಕ್ಷಣೆಯಲ್ಲಿ ಕಂಡುಬಂದಿರುತ್ತದೆ; ಅದಕ್ಕೊಪ್ಪಿಸಿದ ಕಾರ್ಯಭಾರವು, ಹೆಚ್ಚಾಗಿ ಅದರ ಕಾರ್ಯಕ್ಷಮತೆಯು ಕುಂಠಿತವಾಗಿರುತ್ತದೆ. ಈ ಆಡಳಿತ ಯಂತ್ರದ ಕಾರ್ಯಗಳ ರೀತಿ, ನೀತಿಗಳ ಬಗ್ಗೆ ಸಾರ್ವಜನಿಕರಲ್ಲಿ ವಿಚಾರಣೀಯವಾದಂಥ ಅತೃಪ್ತಿ–ಅಸಮಾಧಾನಗಳು ಕಂಡುಬರುತ್ತಲಿವೆ. ಇದಕ್ಕೆ ಆರ್ಥಿಕ ಪರಿಸ್ಥಿತಿಯೇ ಮೂಲ ಕಾರಣವಾಗಿರುತ್ತದೆ. ಸರ್ವಸಾಮಾನ್ಯವಾಗಿ ಹೇಳಬೇಕಾದರೆ ಜನರು ಸರಕಾರವನ್ನು ದೂರುತ್ತಿರುವುದು, ಬೆಲೆಗಳು ಏರಿದುದಕ್ಕೆ; ಹಾಗೂ ಅನ್ನ– ಅರಿವೆ– ವಸತಿಗಳ ಅಭಾವಕ್ಕೆ!

ಜನರಲ್ಲಿ ಈ ಭಾವನೆಯು ಉದ್ಭವಿಸಲಿಕ್ಕೆ ಹಾಗೂ ಹೆಚ್ಚಾಗಲಿಕ್ಕೆ ಅನೇಕ ಮೇಲಧಿಕಾರಿಗಳ–ಅಂದರೆ ಮಂತ್ರಿಗಳ, ಶಾಸನ ಸಭಾಸದಸ್ಯರ, ಉಚ್ಚಮಟ್ಟದ ಸರಕಾರಿ ಅಧಿಕಾರಿಗಳ–ಆಡಳಿತ ರೀತಿಯಲ್ಲಿರುವ ಸಂಪೂರ್ಣತೆಯು, ಪ್ರಾಮಾಣಿಕತೆಯು, ಸತ್ಯದ ಮತ್ತು ನಿಷ್ಕಾಪಟ್ಯದ ಕೊರತೆಯೇ ಕಾರಣವಾಗಿರುತ್ತದೆ. ಈ ಕೊರತೆಯುದ್ಭವಿಸಲು ಪಕ್ಷಪಾತ, ಅನವಶ್ಯಕ ಚಂಚುಪ್ರವೇಶ, ಲಂಚಗೂಳಿತನ ಮೊದಲಾದವು ಕಾರಣವಾಗಿರುತ್ತವೆ. ಸರಕಾರಿ ಕಾರ್ಯಚರಣೆಯಲ್ಲಿ ಉಂಟಾಗುವ ಲಂಬೀಕರಣವೂ ಜನತೆಯಲ್ಲಿ ಅತೃಪ್ತಿ ಅಸಮಾಧಾನಗಳನ್ನು ಹುಟ್ಟಿಸಲು ಕಾರಣವಾಗಿರುತ್ತದೆ.

ಆಡಳಿತೆಯಲ್ಲಿ ಮುಖ್ಯ ವಿಷಯವೇ ಪ್ರಾಮಾಣಿಕತೆಯಾಗಿರುವುದು. ಆದುದರಿಂದ ಆಡಳಿತೆಗಾರನು ಮಂತ್ರಿಯಿರಲಿ, ಶಾಸನಸಭಾ ಸದಸ್ಯನಿರಲಿ, ಉಚ್ಚದರ್ಜೆಯ ಅಧಿಕಾರಿಯಿರಲಿ, ಹೊಣೆಗಾರ ಜನರು ಅವನ ವಿರುದ್ಧ ಲಂಚಗುಳಿತನ ಮೊದಲಾದ ಆರೋಪಗಳನ್ನು ಮಾಡಿ ಅವನು ಸಿದ್ಧಪಡಿಸಲು ಸಿದ್ಧರಿದ್ದಲ್ಲಿ ಅವನನ್ನು ವಿಚಾರಣೆಗೊಳಪಡಿಸಬೇಕು. ಯಾರನ್ನೂ ವಿಚಾರಣೆಯಿಂದ ಮುಕ್ತರನ್ನಾಗಿ ಮಾಡಿ ಕೂಡದು. ಯಾವನೋ ಒಬ್ಬ ಸರಕಾರಿ ನೌಕರನಾಗಲಿ, ಅವನ ಅವಲಂಬಿಗಳಾಗಲಿ ಒಮ್ಮೆಲೆ 'ಸಿರಿವಂತ'ರಾದುದು ಕಂಡು ಬಂದಲ್ಲಿ ಅವನನ್ನು, ಅವನು ಆ ಸಂಶಯವನ್ನು ನಿವಾರಿಸುವ ವರೆಗೆ, ದೋಷಿಯೆಂದೇ ಊಹಿಸಬೇಕು.

ಕೇಂದ್ರ ಹಾಗೂ ರಾಜ್ಯ ಸರಕಾರಗಳಲ್ಲಿ ಏಕರೂಪತೆಯಿರಬೇಕಲ್ಲದೆ ಉದ್ದೇಶ ನೀತಿ, ಕಾರ್ಯಪದ್ಧತಿ ಮೊದಲಾದವುಗಳಲ್ಲಿ ಆನೆರಡರ ನಡುವೆ ತಿಕ್ಕಾಟ ಬರಕೂಡದು ದೇಶದ ಆರ್ಥಿಕ ಪರಿಸ್ಥಿತಿಯನ್ನು ತೀವ್ರತಮ ರೀತಿಯಲ್ಲಿ ಸುಧಾರಿಸುವ ಪ್ರಯತ್ನವು ಕೇಂದ್ರ ಹಾಗೂ ರಾಜ್ಯ ಸರಕಾರಗಳೆರಡರಿಂದಲೂ ಒಮ್ಮತದಲ್ಲಿ, ಒಕ್ಕಟ್ಟಿನಿಂದ ನಡೆಯಬೇಕು.

ನೌಕರಶಾಹಿಯಲ್ಲಿಯೆಲ್ಲಿಯ 'ವತೀಲಿ ಬಾಜಿ'ಯು, ಅದು ನಡೆಯುವ ರೀತಿಯೇ 'ದಗಲ್ ಬಾಜಿ'ಯದಾಗಿರುವುದರಿಂದ, ಬಹಳ ಭಯಂಕರವಾದದ್ದಿರುವುದು. ಇದನ್ನು ಹೊಡೆದು ಹಾಕುವ ಮೊಟ್ಟ ಮೊದಲನೆಯ ಉಪಾಯವೆಂದರೆ–ಸರಕಾರಿ ನೌಕರರು ಯಾವದೇ ಪಕ್ಷಪಂಗಡಗಳಲ್ಲಿ ಸೇರಿರದಂತೆ ಹಾಗೂ ಸೇರದಂತೆ ನೋಡಿಕೊಳ್ಳುವುದು. (ಸಾರ್ವತ್ರಿಕ ಆಯ್ಕೆಯು ಸನಿಹದಲ್ಲಿ ಬಂದಿರುವ ಈ ಸಮಯದಲ್ಲಿ ಯಂತೂ ಇದರ ಅವಶ್ಯಕತೆ ಬಹಳವಿದೆ) ಸಾರ್ವಜನಿಕ ವ್ಯಕ್ತಿಗಳಿಂದ ಅಥವಾ ಕಂಪೆನಿ, ಸಂಘ, ಸಂಸ್ಥೆ, ಫರ್ಮ್ ಮೊದಲಾದವುಗಳಿಂದ ಸರಕಾರಿ ಅಧಿಕಾರಿಗಳಿಗೆ, ಮಂತ್ರಿಗಳಿಗೆ ಸಮಾರಂಭ, ಸಂತೋಷ ಕೂಟ ಮೊದಲಾದವುಗಳು ದೊರೆಯುತ್ತಿರುವುದು ಕೂಡಲೆ ನಿಲ್ಲಿಸಲ್ಪಟ್ಟು ಯಾವನೇ ಸರಕಾರಿ ಅಧಿಕಾರಿ ಹಾಗೂ ಮಂತ್ರಿಯು ಇಂಥ ಕೂಟ ಸಮಾರಂಭಗಳಲ್ಲಿ ಭಾಗತೆಗೆದುಕೊಳ್ಳಲು ತೀವ್ರತಮ ನಿರ್ಬಂಧವಿರಬೇಕು. ತಮ್ಮ ಸಾಮಾಜಿಕ ಚಲನವಲನದಲ್ಲಿ ತಮಗೆ ಸೇರದಂತಹ ಸರಕಾರಿ ನೀತಿ ಧೋರಣಗಳನ್ನು ಸರಕಾರಿ ನೌಕರರೇ ಟೀಕಿಸುತ್ತಿದ್ದು ಈ ಪದ್ಧತಿಯೂ ಕೂಡಲೇ ನಿಲ್ಲುವಂತೆ ಆಗಬೇಕು.

ಅನ್ನ ಸಮಸ್ಯೆಯು ದೇಶದಲ್ಲಿ ಅತ್ಯಂತ ಬಿಕ್ಕಟ್ಟಿನದೂ, ಪ್ರಥಮ ಪ್ರಾಶಸ್ತ್ಯದ್ದೂ ಆಗಿರುವದರಿಂದ ಈ ಸಮಸ್ಯಾ ಪರಿಹಾರಕ್ಕಾಗಿ ಕೇಂದ್ರದಲ್ಲಿ ಎರಡು ಜನರ ಒಂದು ಬೋರ್ಡು ಇದ್ದು ಅದರಲ್ಲಿ ಒಬ್ಬನು ಸುಸಮರ್ಥ ಮಂತ್ರಿಯೂ, ಒಬ್ಬನು ಅತ್ಯಂತ ಪ್ರಭಾವೀ ಸರಕಾರಿ ಉಚ್ಚ ಅಧಿಕಾರಿಯೂ ಇರಬೇಕು. ಇವರಲ್ಲಿ ಯಾರಿಗೂ ಈ ಅನ್ನ ಸಮಸ್ಯಾ ನಿವಾರಣೆ, ಅಧಿಕೋತ್ಪಾದನೋಪಾಯಗಳನ್ನು ಬಿಟ್ಟು ಎರಡನೆಯ ಯಾವದೇ ಕಾರ್ಯದ ಹೊರೆ, ಹೊಣೆಗಳು ಇರತಕ್ಕದ್ದಲ್ಲ.

ಕೊನೆಯದಾಗಿ ಹೊಣೆಗಾರಿಕೆಯ ಹಾಗೂ ಕಾರ್ಯಕರಣದ ವಿಕೇಂದ್ರೀಕರಣವಾಗಬೇಕೆನ್ನುವ ಈ ಸಮಯದಲ್ಲಿ ಕೂಡ, ಆ ಕಾರ್ಯವು, ಉದ್ದಿಶ್ಯ ವಿಘಾತತೆಗೆ ಹಾಗೂ ಸಾಮರ್ಥ್ಯ ಹೀನತೆಗೆ ಹಬ್ಬುವ ಅವಕಾಶವನ್ನು ಕೊಡದಂತೆ ನಡೆಯಬೇಕಾದುದು ಅವಶ್ಯವಾಗಿರುತ್ತದೆ. ಏಕೆಂದರೆ ಯಾವದೇ ಒಂದು ಒಳ್ಳೆಯ ಯೋಜನೆಗೂ ಈ ಎರಡು (ಉದ್ದಿಶ್ಯ ವಿಘಾತತೆ ಹಾಗೂ ಸಾಮರ್ಥ್ಯ ಹೀನತೆಗಳು) ಗುಣಗಳು ದೂರಕವಾಗಿರುತ್ತವೆ. ಆದುದರಿಂದಲೇ 'ಯೋಗಕ್ಷೇಮ' ರಾಜ್ಯದ ನಿರ್ಮಾಣ ಕಾರ್ಯದಲ್ಲಿ ಈ ಎರಡು ಗುಣಗಳು ಇರದಂತೆ ನೋಡಿಕೊಳ್ಳುವದು ಅತ್ಯಾವಶ್ಯಕ ಹಾಗೂ ಪ್ರಥಮ ಪ್ರಾಶಸ್ತ್ಯದ ಮಾತಾಗಿರುತ್ತದೆ.

'ಜೈ ಹಿಂದ್.'

ಕೊಡಗು ಪ್ರಾಂತೀಕ ಸಹಕಾರಿ, ಮಾರ್ಕೆಟಿಂಗ್, ಫೆಡರೇಷನ್ ಲಿಮಿಟೆಡ್., ವೀರಾಜಪೇಟೆ.

ನಮ್ಮಲ್ಲಿ ಕೋವಿಗಳು, ತೋಟಗಳು ಮತ್ತು ಎಲ್ಲಾ ತರಹದ ವ್ಯವಸಾಯದ ಹತ್ಯಾರುಗಳು ದೊರೆಯುತ್ತವೆ.

1. 32 ಪಿಸ್ತೂಲುಗಳು (Pistols) ಕ್ರಯ ರೂ. 162 ರಿಂದ 245ರ ವರೆಗೆ.
2. 12ನೇ ನಂಬರಿನ ಒಂಟಿ ಹೊಳವಿನ ಕೋವಿ ಕ್ರಯ ರೂ. 320–0–0
3. 12ನೇ ನಂಬರಿನ ಜೋಡು ಹೊಳವಿನ ಕೋವಿ (Webley & Scott)
4. 12ನೇ ನಂಬರಿನ ಜೋಡು ಹೊಳವಿನ ಕೋವಿ (Spanish make)
5. .32 ಪಿಸ್ತೂಲು ಮತ್ತು ರಿವಾಲ್ವರುಗಳ ತೋಟಗಳೂ ಸಹ ದೊರೆಯುತ್ತವೆ.
6. ಕಾಫಿ ಮತ್ತು ಕಿತ್ತಳೆ ಗಿಡಗಳಿಗೆ ಸ್ಪ್ರೆಮಾಡುವ ಪಂಪುಗಳು (Spraying Pumps)
7. $\frac{3}{4}$" $\frac{5}{8}$" $\frac{1}{2}$" $\frac{3}{8}$" $\frac{1}{4}$" ಕಬ್ಬಿಣದ ಸಲಾಕೆಗಳು.

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

(ಅವಶ್ಯವಿರುವ ಕೋವಿಗಳಿಗೂ, ತೋಟಗಳಿಗೂ ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟು "Special permit" ಪಡೆದವರಿಗೆ ಮಾತ್ರ ದೊರೆಯುವದು)

ಎಂ. ಎಸ್. ಸೋಮಯ್ಯ,
ಗೌರವ ಕಾರ್ಯದರ್ಶಿ.

ಕ2–49

Edited, Printed and Published by P. I. Bellienne at 'Kodagu' Press, Mercara, for 'Kodagu' Ltd.